# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶುಕ್ರವಾರ, ಫೆಬ್ರವರಿ 21, 2025

ಸಂಪುಟ : 51 ಸಂಚಿಕೆ : 280 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


# ಉತ್ತಮ ರಾಜಕಾರಣಿ ಆಯ್ಕೆ ಜನರ ಹೊಣೆ

## 'ಮಾನವತೆಯ ಬೆಳಕು' ಕೃತಿ ಲೋಕಾರ್ಪಣೆಗೊಳಿಸಿದ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್




ದಾವಣಗೆರೆ, ಫೆ.20- ವೈದ್ಯರಾದರೆ ವೈದ್ಯಕೀಯ ಕ್ಷೇತ್ರವನ್ನು, ಶಿಕ್ಷಕರಾದರೆ ಶೈಕ್ಷಣಿಕ ಕ್ಷೇತ್ರವನ್ನು ಸುಧಾರಿಸಬಹುದು. ಆದರೆ ರಾಜಕಾರಣಿಗಳಾದರೆ ಎಲ್ಲಾ ಕ್ಷೇತ್ರಗಳಲ್ಲೂ ಸುಧಾರಣೆ ತರಬಹುದು. ಈ ನಿಟ್ಟಿನಲ್ಲಿ ಉತ್ತಮ ರಾಜಕಾರಣಿಗಳನ್ನು ಆಯ್ಕೆ ಮಾಡುವ ಹೊಣೆ ಜನರ ಮೇಲಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಪ್ರತಿಪಾದಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಜೆ.ಎಂ.ಇಮಾಂ ಟ್ರಸ್ಟ್ ಹಾಗೂ ಜೆ.ಎಂ.ಇಮಾಂ ಸ್ಮಾರಕ ಶಾಲೆಯ ವತಿಯಿಂದ ಗುರುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ 'ಮಾನವತೆಯ ಬೆಳಕು- ಜಗಲೂರು ಮಹಮ್ಮದ್ ಇಮಾಂ' ಕೃತಿ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಹಿಂದೆ ರಾಜಕಾರಣಿಗಳು ರಾಜಕೀಯವನ್ನೂ, ವ್ಯಾಪಾರಿಗಳು ವ್ಯಾಪಾರವನ್ನೇ ಮಾಡುತ್ತಿದ್ದರು. ಇಬ್ಬರಲ್ಲೂ ಪರಸ್ಪರ ಸಹಕಾರವಿರುತ್ತಿತ್ತು. ಬರುಬರುತ್ತಾ ರಾಜಕಾರಣಿಗಳು ಉದ್ಯಮಕ್ಕೂ, ಉದ್ಯಮಿಗಳು ರಾಜಕೀಯಕ್ಕೂ ಕಾಲಿಟ್ಟರು. ಕಾಲಕ್ಕೆ ಅನುಗುಣವಾಗಿ ರಾಜಕಾರಣವೂ ಬದಲಾಯಿತು. ಮೊದಲಿದ್ದ ಪ್ರಾಮಾಣಿಕತೆ ಮರೆಯಾಗಿದೆ. ಮುಂದಿನ ಹತ್ತು ವರ್ಷಗಳಲ್ಲಿ ರಾಜಕಾರಣ ಮತ್ತಷ್ಟು ಕಲುಷಿತಗೊಳ್ಳಬಹುದು ಎಂದು ಹೇಳಿದರು.

ಆಧುನಿಕತೆ ಹಾಗೂ ತಂತ್ರಜ್ಞಾನದ ಕಾಲದಲ್ಲಿ ಮಾನವೀಯತೆ ಮರೆಯಾಗಿದೆ. ಮನುಷ್ಯನ ಜೀವನದಲ್ಲಿ ಮಾನವೀಯತೆಗೆ ಹೆಚ್ಚಿನ ಮಹತ್ವವಿದೆ. ಯುವ ಜನತೆ ಮಾನವೀಯತೆಯ ರಾಯಭಾರಿಗಳಾಗಬೇಕು. ಆದರೆ ಅದು ಸುಲಭವೂ ಅಲ್ಲ. ಅಂಬೇಡ್ಕರ್, ಇಮಾಂ ಸಾಹೇಬರಂತಹ ಮಾನವೀಯ ಗುಣಗಳು ಯುವ ಜನರಿಗೆ ಪ್ರೇರಣೆ, ಪ್ರೋತ್ಸಾಹ ನೀಡುತ್ತವೆ ಇಂತಹ ಉತ್ತಮ ವ್ಯಕ್ತಿಗಳ ಪುಸ್ತಕ ಓದುವ (4ನೇ ಪುಟಕ್ಕೆ)

### ಮಾತುಗಳಿಂದ ಸಮಸ್ಯೆ, ಬಗೆಹರಿಸಲು ಅರ್ಧಾಯುಷ್ಯ ವ್ಯರ್ಥ : ಖಾದರ್

ಚೀನಾ ದೇಶದ ಪ್ರಾಣಿ ಹಾಗೂ ಭಾರತದ ಪ್ರಾಣಿ ಎರಡೂ ಗಡಿಯಲ್ಲಿ ಮಲಗಿದ್ದವು. ಒಂದು ದಿನ ಚೀನಾದ ಪ್ರಾಣಿ ಭಾರತದತ್ತ ಬರುತ್ತಿತ್ತು ಇದನ್ನು ನೋಡಿದ ಭಾರತದ ಪ್ರಾಣಿ, ನಿಮಗೆ ತಿನ್ನಲು ಬೇಕಾದಷ್ಟಿದೆ. ಗಟ್ಟಿ ಮುಟ್ಟಾಗಿಯೂ ಇರುವೆ. ಎಲ್ಲಾ ಸೌಕರ್ಯಗಳೂ ನಿಮ್ಮಲ್ಲಿವೆ. ಆದರೂ ಏಕೆ ನಮ್ಮತ್ತ ಬರುತ್ತಿರುವೇ ? ಎಂದು ಪ್ರಶ್ನಿಸಿತು.

ನಮ್ಮಲ್ಲಿ ಎಲ್ಲಾ ಸವಲತ್ತುಗಳಿವೆ. ಆದರೆ ಇಲ್ಲಿ ಬೊಗಳಲು ಬಿಡುತ್ತಿಲ್ಲ. ಅದಕ್ಕೆ ಬರುತ್ತಿದ್ದೇನೆ ಎಂದು ಚೀನಾ ದೇಶದ ಪ್ರಾಣಿ ಹೇಳಿತಂತೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಹೇಳಿದ ಕಥೆ ಇದು.

ಮುಂದುವರೆದು ಮಾತನಾಡಿದ ಅವರು, ನಮ್ಮಲ್ಲಿ ಮಾತನಾಡಲು ಅವಕಾಶವಿದೆ ಎಂದು ಬಾಯಿಗೆ ಬಂದಂತೆ ಮಾತನಾಡುವುದು. ಸಮಸ್ಯೆ ಸೃಷ್ಟಿಸುವುದು ಮತ್ತು ಅದನ್ನು ಬಗೆಹರಿಸುವುದರಲ್ಲಿಯೇ ಅರ್ಧ ಆಯುಷ್ಯ ಕಳೆಯುತ್ತಿದ್ದೇವೆ ಎಂದರು.

ಪ್ರತಿಯೊಬ್ಬರ ಮಾತುಗಳು ಹಾಗೂ ಮಾಡುವ ಕೆಲಸ ಸಮಾಜ ಹಾಗೂ ದೇಶಕ್ಕೆ ಪೂರಕವಾಗಿರಬೇಕು. ಅವನೇ ನಿಜವಾದ ದೇಶಪ್ರೇಮಿ ಎಂದರು.

ಒಬ್ಬರನ್ನೊಬ್ಬರು ದ್ವೇಷಿಸುತ್ತಾ, ದೂಷಿಸುತ್ತಾ ಹೋಗುವ ಬದಲು ನಮ್ಮನ್ನು ನಾವು ಸರಿಪಡಿಸಿಕೊಂಡು ಹೋಗುವ ಕಾಲಘಟ್ಟದಲ್ಲಿ ನಾವಿದ್ದೇವೆ ಎಂದರು.

> ಇಮಾಂ ಸಾಹೇಬರು ಯಾವುದೇ ಜಾತಿ, ಸಮಾಜಕ್ಕೆ ಸೇರಿದವರಲ್ಲ. ಶರಣರ ನುಡಿಯಂತೆ ಸಮಾಜ ಸುಧಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡಿದ ಅವರ ಜೀವನ ಪರಿಪೂರ್ಣವಾದದ್ದು.
>
> - ಡಾ.ಪ್ರಭಾ ಮಲ್ಲಿಕಾರ್ಜುನ್, ಸಂಸದೆ

> ರಾಜಕಾರಣ ಸೇವಾ ಕ್ಷೇತ್ರ ಎಂದು ಭಾವಿಸಿದ್ದ ಆಗಿನ ಕಾಲದ ನಾಯಕರು ನಮಗೆ ಯಾವತ್ತೂ ಅನುಕರಣೀಯ ಹಾಗೂ ಆದರ್ಶ.
>
> - ದಾದಾಪೀರ್ ನವಿಲೇಹಾಳ್, ನಿವೃತ್ತ ಪ್ರಾಧ್ಯಾಪಕರು

> ಪ್ರಾಥಮಿಕ ಶಿಕ್ಷಣ ಸರ್ಕಾರದ ಜವಾಬ್ದಾರಿ ಎಂಬ ಕಾಯ್ದೆ ಮೈಸೂರು ಅರಸರ ಕಾಲದಲ್ಲಿ ರೂಪುಗೊಳ್ಳಲು ಇಮಾಂ ಸಾಹೇಬರು ಕಾರಣೀಕರ್ತರು. ರಾಜಕೀಯ ವೃತ್ತಿಯಲ್ಲ, ಸೇವೆಯ ಅವಕಾಶ ಎಂಬುದಾಗಿ ಬಲವಾಗಿ ನಂಬಿದ್ದ ಇಮಾಂ ಅವರು ರಾಜಕಾರಣದಲ್ಲಿ ನೈತಿಕತೆ ಕಾಪಾಡಿಕೊಂಡಿದ್ದರು.
>
> - ಪ್ರೊ.ರಾಜೇಂದ್ರ ಚನ್ನಿ, ನಿವೃತ್ತ ಪ್ರಾಧ್ಯಾಪಕರು

# ಮುಡಾ ಹಗರಣ: ಅಧಿಕಾರಿಗಳು ಖಾಸಗಿ ಸಂಸ್ಥೆಯಿಂದ ಎಡವಟ್ಟು

### ಲೋಕಾಯುಕ್ತದಿಂದ 11 ಸಾವಿರ ಪುಟಗಳ ತನಿಖಾ ವರದಿ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಸಲ್ಲಿಕೆ

ಬೆಂಗಳೂರು, ಫೆ. 20 - ಮುಡಾ ಹಗರಣದಲ್ಲಿ ನ್ಯಾಯಾಲಯಕ್ಕೆ ಲೋಕಾಯುಕ್ತ 'ಬಿ' ರಿಪೋರ್ಟ್ ಸಲ್ಲಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಬಾಮೈದ ಮಲ್ಲಿಕಾರ್ಜುನ ಸ್ವಾಮಿ, ಜಮೀನು ಮಾಲೀಕ ದೇವರಾಜು ಅವರಿಗೆ ಕ್ಲೀನ್ ಚಿಟ್ ನೀಡಿದೆ.

ಸಿದ್ದರಾಮಯ್ಯ ಕುಟುಂಬ 14 ಬಿಡಿ ನಿವೇಶನಗಳನ್ನು ಪಡೆದಿರುವುದಕ್ಕೆ ಸಂಬಂಧಿಸಿದಂತೆ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, 27 ಸಂಪುಟಗಳನ್ನು ಒಳಗೊಂಡ 11,000 ಪುಟಗಳ ತನಿಖಾ ವರದಿಯನ್ನು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಸಲ್ಲಿಸಿದರು.

ಎಂಟು ಸಾವಿರ ಪುಟಗಳ ವರದಿ, 3000 ದಾಖಲೆಗಳನ್ನು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರಿಗೆ ಸಲ್ಲಿಸಿದರು.

ಸಾಕ್ಷ್ಯಾಧಾರಗಳ ಕೊರತೆ ಹಿನ್ನೆಲೆಯಲ್ಲಿ ಪ್ರಮುಖ ನಾಲ್ವರು ಆರೋಪಿಗಳ ಪಾತ್ರವಿಲ್ಲ ಎಂಬುದು ಕಂಡುಬಂದಿದೆ, ಜೊತೆಗೆ ಇವರು ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷಿಗಳಿಲ್ಲ ಎಂದು ವರದಿಯಲ್ಲಿ ಹೇಳಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ 50 ಜನರ ಹೇಳಿಕೆಗಳನ್ನು ದಾಖಲಿಸಿದ್ದು, ತನಿಖಾ ಸಂದರ್ಭದಲ್ಲಿ ಪ್ರಮುಖ ಆರೋಪಿಗಳ ಪಾತ್ರ ಇಲ್ಲ ಹಾಗೂ ಸಾಕ್ಷಿಗಳೂ ಇಲ್ಲ, ಹಾಗಾಗಿ ಅವರನ್ನು ಬಿಟ್ಟು ತನಿಖೆ ಮುಂದುವರೆಸುವುದಾಗಿ ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಮಾಡಿರುವ ಆರೋಪಗಳೆಲ್ಲವೂ ಸುಳ್ಳು ಎಂದಿರುವ ಲೋಕಾಯುಕ್ತ, 14 ನಿವೇಶನಗಳ ಹಂಚಿಕೆ ವಿಷಯದಲ್ಲಿ ಮುಖ್ಯಮಂತ್ರಿ ಕುಟುಂಬ ಮುಡಾ ಮೇಲೆ ಯಾವುದೇ ಪ್ರಭಾವ ಬೀರಿಲ್ಲ ಎಂದು ತಿಳಿಸಿದೆ.

ಇವರ ಕುಟುಂಬಕ್ಕೆ ಪರ್ಯಾಯವಾಗಿ ಮುಡಾದಿಂದ ಸಿಗಬೇಕಾದದ್ದೂ ದೊರೆತಿಲ್ಲ. ಈಗಾಗಲೇ ಪಾರ್ವತಿ ಅವರು, ತಾವು ಪಡೆದಿದ್ದ 14 (4ನೇ ಪುಟಕ್ಕೆ)

# ಮಾ.3ರಿಂದ ಎರಡು ಹಂತದ ಬಜೆಟ್ ಅಧಿವೇಶನ



ದಾವಣಗೆರೆ, ಫೆ.20- ವಿಧಾನಸಭೆಯ ಬಜೆಟ್ ಅಧಿವೇಶನ ಮಾರ್ಚ್ 3ರಿಂದ 21ರವರೆಗೆ ಎರಡು ಹಂತದಲ್ಲಿ ನಡೆಯಲಿದೆ. ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್ ಅವರು ಜಂಟಿ ಸದನ ಉದ್ದೇಶಿಸಿ ಅಧಿವೇಶನದ ಮೊದಲ ದಿನ ಮಾತನಾಡಲಿದ್ದಾರೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರ ಭಾಷಣದ ಮೇಲೆ ಚರ್ಚಿಸಲು ಮೂರು ದಿನಗಳ ಕಾಲಾವಕಾಶವಿದೆ. ಮಾರ್ಚ್ 7ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಲಿದ್ದಾರೆ. ಅಧಿವೇಶನದ ರೂಪುರೇಷೆ ಸಿದ್ಧವಾಗುತ್ತಿದೆ ಎಂದರು.

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹಾಗೂ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರಿಗೆ ಸಂಬಂಧಿಸಿದ ಪ್ರಕರಣದ ಕುರಿತು ಪ್ರತಿಕ್ರಿಯೆ ನೀಡುವುದಿಲ್ಲ. ಪ್ರಕರಣವು ವಿಧಾನಪರಿಷತ್ ಸ್ಪೀಕರ್ ಬಸವರಾಜ ಹೊರಟ್ಟಿ ಅವರ ವ್ಯಾಪ್ತಿಗೆ ಬರುತ್ತದೆ ಎಂದರು.

# ದೆಹಲಿ ಸಿಎಂ ರೇಖಾ ಗುಪ್ತ ಪ್ರಮಾಣ



ನವದೆಹಲಿ, ಫೆ. 20 - ದೆಹಲಿ ಮುಖ್ಯಮಂತ್ರಿ ಆಗಿ ಮೊದಲ ಬಾರಿ ಶಾಸಕಿಯಾಗಿರುವ ರೇಖಾ ಗುಪ್ತ ಅವರು 6 ಸಚಿವರೊಂದಿಗೆ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಮಲೀಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ಹಾಗೂ ಎನ್‌ಡಿಎ ಉನ್ನತ ನಾಯಕರು ಉಪಸ್ಥಿತರಿದ್ದರು. ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಸೋಲಿಸಿದ್ದ ಪರ್ವೇಶ್ ವರ್ಮ, ಹಿಂದುತ್ವ ನಾಯಕ ಕಪಿಲ್ ಮಿಶ್ರ, ಸಿಖ್ ಸಮುದಾಯದ ಮನ್‌ಜಿಂದರ್ ಸಿಂಗ್ ಸಿರ್ಸ ಸೇರಿದಂತೆ 6 ಜನರು ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ. ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನ ಅವರು ಪ್ರಮಾಣ ವಚನ ಬೋಧಿಸಿದರು.


# ಮೈಕ್ರೋ ಫೈನಾನ್ಸ್ ವಿಧೇಯಕಕ್ಕೆ ಸಂಪುಟದ ಅನುಮೋದನೆ

ಬೆಂಗಳೂರು, ಫೆ. 20 – ಮೈಕ್ರೋ ಫೈನಾನ್ಸ್ ಕಂಪನಿ ಮತ್ತು ಖಾಸಗಿ ಲೇವಾದೇವಿಗಾರರಿಗೆ ಕಡಿವಾಣ ಹಾಕುವ ಉದ್ದೇಶದಿಂದ ಕರ್ನಾಟಕ ಅಧಿಕ ಬಡ್ಡಿ ನಿಷೇಧ, ಕರ್ನಾಟಕ ಗಿರವಿದಾರರು, ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕಕ್ಕೆ ಸಂಪುಟ ಅನುಮೋದನೆ ನೀಡಿದೆ. ಸಮಾಜ ಕಲ್ಯಾಣ ಇಲಾಖೆಯ 63 ಡಾ.ಅಂಬೇಡ್ಕರ್ ವಿದ್ಯಾರ್ಥಿನಿ ಲಯಗಳ ಕಟ್ಟಡಗಳನ್ನು 441 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಸಂಪುಟ ಅನುಮೋದನೆ ನೀಡಿದೆ.

ಸೂರಿಲ್ಲದ 10,000 ಮೀನುಗಾರರಿಗೆ ಸರ್ಕಾರದ (4ನೇ ಪುಟಕ್ಕೆ)

# ಪರೀಕ್ಷಾ ಕರ್ತವ್ಯ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿ

## ದ್ವಿತೀಯ ಪಿಯುಸಿ ಪರೀಕ್ಷೆ ಸಿದ್ಧತಾ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಸೂಚನೆ



ದಾವಣಗೆರೆ, ಫೆ.20- ದ್ವಿತೀಯ ಪಿಯುಸಿ ಪರೀಕ್ಷೆ ಮಾರ್ಚ್ 1 ರಿಂದ 20 ರವರೆಗೆ ನಡೆಯುತ್ತದೆ. ಪರೀಕ್ಷಾ ಕಾರ್ಯದಲ್ಲಿ ಲೋಪವಾಗದಂತೆ ಕಾರ್ಯನಿರ್ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಿನ್ನೆ ಆಯೋಜಿಸಲಾಗಿದ್ದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಪೂರ್ವ ಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರೀಕ್ಷೆಗೆ ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು, ಪ್ರಾಂಶುಪಾಲರು, ಉಪನ್ಯಾಸಕರು ಶ್ರಮವಹಿಸಿ, ಬಹಳ ಎಚ್ಚರಿಕೆಯಿಂದ ಜಿಲ್ಲೆಗೆ ಉತ್ತಮ ಹಾಗೂ ಹೆಚ್ಚಿನ ಫಲಿತಾಂಶ ತರುವಲ್ಲಿ ತಮ್ಮಗಳ ಜವಾಬ್ದಾರಿ ಇದ್ದು, ಎಚ್ಚರಿಕೆಯಿಂದ ಕೆಲಸ ನಿರ್ವಹಿಸಿ ಎಂದು ಸೂಚಿಸಿದರು.

ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಸಿದ್ಧತೆ ಮಾಡಿಕೊಂಡ ಬಗ್ಗೆ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಪರೀಕ್ಷಾ ಕಾರ್ಯ ನಿರ್ವಹಿಸುವಲ್ಲಿ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯತೆ ಬೇಡ, ನಿಯಮಗಳನ್ನು ಸರಿಯಾದ ರೀತಿಯಲ್ಲಿ ಪಾಲನೆ ಮಾಡದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನು ನೇರವಾಗಿ ಹೊಣೆ ಮಾಡಲಾಗುವುದು ಎಂದು ಹೇಳಿದರು.

ಶಾಲಾ ಶಿಕ್ಷಣ ಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ ಜಿ. ಮಾತನಾಡಿ, ದಾವಣಗೆರೆ ತಾಲ್ಲೂಕಿನಲ್ಲಿ 20 ಕೇಂದ್ರಗಳು, ಹರಿಹರದಲ್ಲಿ 4, ಜಗಳೂರಿನಲ್ಲಿ 3, ಚನ್ನಗಿರಿಯ 5, ಹೊನ್ನಾಳಿಯ 3 ಕೇಂದ್ರಗಳು ಸೇರಿದಂತೆ ಒಟ್ಟು 35 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಈ ಕೇಂದ್ರಗಳಲ್ಲಿ 21,153 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷಾ ಕೇಂದ್ರದೊಳಗೆ ಕರ್ತವ್ಯ ನಿರತ ಸಿಬ್ಬಂದಿ ಹೊರತುಪಡಿಸಿ, ಇತರೆ ಯಾರಿಗೂ ಪ್ರವೇಶ ಇರುವುದಿಲ್ಲ ಎಂದರು. (4ನೇ ಪುಟಕ್ಕೆ)

# ಪಿಎಂ ಕೇರ್ಸ್ ಎಲ್ಲಾ ಮಕ್ಕಳಿಗೆ ಉನ್ನತ ಶಿಕ್ಷಣ ಸೌಲಭ್ಯ

ನವದೆಹಲಿ, ಫೆ. 20 – ಪಿಎಂ ಕೇರ್ಸ್ ಯೋಜನೆಯಲ್ಲಿ ಬದಲಾವಣೆ ತರಲಾಗಿದ್ದು, ಈ ಮೂಲಕ ಮಕ್ಕಳಿಗೆ ಉನ್ನತ ಶಿಕ್ಷಣ ಸೌಲಭ್ಯ ಒದಗಿಸಲಾಗುವುದು. ಮೂಲತಹ 6 ವರ್ಷಗಳಿಗೆ ಉಚಿತ ಶಿಕ್ಷಣ ನೀಡಲು ಈ ಯೋಜನೆ ರೂಪಿಸಲಾಗಿತ್ತು. ನಂತರದಲ್ಲಿ ಹಲವಾರು ಬದಲಾವಣೆಗಳನ್ನು ತರಲಾಗಿದೆ.

ಜಾತಿ ಹಾಗೂ ಆದಾಯದ ನಿರ್ಬಂಧವಿಲ್ಲದಂತೆ ಪಿಎಂ ಕೇರ್ಸ್ ಯೋಜನೆಯಡಿ ಬರುವ ಎಲ್ಲಾ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತರಬೇತಿ ನೀಡಲು ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

# ಹೈಕೋರ್ಟ್ ಹಾಲಿ ಜಡ್ಜ್ ವಿರುದ್ಧದ ದೂರು ದಾಖಲು

### ಲೋಕಪಾಲ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ, ಫೆ. 20 - ಹೈಕೋರ್ಟ್ ಹಾಲಿ ನ್ಯಾಯಮೂರ್ತಿಗಳ ವಿರುದ್ಧದ ದೂರುಗಳನ್ನು ದಾಖಲಿಸಿಕೊಳ್ಳಲು ಲೋಕಪಾಲ್ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ಇಂತಹ ಆದೇಶ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಕಳವಳ ತರುವಂತದ್ದಾಗಿದೆ ಹಾಗೂ ವಿಚಲಿತಗೊಳಿಸುವಂತದ್ದಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ನೇತೃತ್ವದ ಪೀಠ ಈ ಬಗ್ಗೆ ತಡೆಯಾಜ್ಞೆ ಹೊರಡಿಸಿದೆ. ಅಲ್ಲದೇ, ಕೇಂದ್ರ ಸರ್ಕಾರ, ಲೋಕಪಾಲ್ ರಿಜಿಸ್ಟ್ರಾರ್ ಹಾಗೂ ಹೈಕೋರ್ಟ್ (4ನೇ ಪುಟಕ್ಕೆ)

# ಮುಂಗಾರು ಪೂರ್ವದಲ್ಲಿ ವಾಡಿಕೆಗಿಂತ ಹೆಚ್ಚು ಮಳೆ

ಬೆಂಗಳೂರು, ಫೆ. 20 - ರಾಜ್ಯದಲ್ಲಿ ಮುಂಗಾರು ಪೂರ್ವದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ನಿರೀಕ್ಷೆಯಿದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಸಂಪುಟ ಉಪ ಸಮಿತಿ ಸಭೆಯಲ್ಲಿ ತಿಳಿಸಿದ್ದಾರೆ.

ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ 2025ನೇ ಸಾಲಿನ ಹಿಂಗಾರು -ಮುಂಗಾರು ಮಳೆ ಸ್ಥಿತಿ, ಕೃಷಿ, ಕುಡಿಯುವ ನೀರು, ಹವಾಮಾನ ಹಾಗೂ ಅಣೆಕಟ್ಟೆಗಳಲ್ಲಿನ ನೀರಿನ ಮಟ್ಟದ ಕುರಿತು ಚರ್ಚಿಸಲಾಯಿತು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಕೃಷಿ (4ನೇ ಪುಟಕ್ಕೆ)

# ಗೋಧಿ ಆವಕದ ಮೇಲೆ ನಿರ್ಬಂಧ

ನವದೆಹಲಿ, ಫೆ. 20 - ಗೋಧಿ ಬೆಲೆ ನಿಯಂತ್ರಿಸುವ ಸಲುವಾಗಿ ಸಗಟು ಮಾರಾಟಗಾರರು, ಚಿಲ್ಲರೆ ವರ್ತಕರು ಹಾಗೂ ಸಂಸ್ಕರಣ ಘಟಕಗಳ ಅವಕ ಮಿತಿಯನ್ನು ಕೇಂದ್ರ ಸರ್ಕಾರ ಬಿಗಿ ಮಾಡಿದೆ. ಆದರೂ ದೇಶದಲ್ಲಿ ಸಮರ್ಪಕ ಗೋಧಿ ದಾಸ್ತಾನು ಇದೆ (5ನೇ ಪುಟಕ್ಕೆ)

# ನಗರಸಭೆ 1.74 ಕೋಟಿ ರೂ. ಉಳಿತಾಯ ಬಜೆಟ್



ರಾಣೇಬೆನ್ನೂರು, ಫೆ.20- ಬಾಕಿ ಉಳಿದ 9 ತಿಂಗಳ ಅವಧಿಗೆ ಅಧ್ಯಕ್ಷ ಗಾದಿಯಲ್ಲಿ ಕುಳಿತಿರುವ ಚಂಪಕ ಬಿಸಲಳ್ಳಿ ಅವರು ತಮ್ಮ ಮೊದಲ ಸಭೆಯಲ್ಲಿಯೇ 2025ರ ಆಯ-ವ್ಯಯ ಮಂಡಿಸಿ, 1.74 ಕೋಟಿ ರೂ. ಉಳಿತಾಯ ಮಾಡುತ್ತಿರುವುದಾಗಿ ಘೋಷಿಸಿದರು.

ಈ ವೇಳೆ ವೇದಿಕೆಯಲ್ಲಿದ್ದ ಶಾಸಕ ಪ್ರಕಾಶ ಕೋಳಿವಾಡ ಸೇರಿದಂತೆ, ಉಪಾಧ್ಯಕ್ಷ ನಾಗರಾಜ ಪವಾರ, ಪೌರಾಯುಕ್ತ ಪಕ್ಕೀರಪ್ಪ ಇಂಗಳಗಿಳ ಹಾಗೂ ಸರ್ವ ಸದಸ್ಯರು ಅಧ್ಯಕ್ಷರ ಘೋಷಣೆಗೆ ಸ್ಪಂದಿಸಿ, ಟೇಬಲ್ ಭಾರಿಸಿ ಸ್ವಾಗತಿಸಿದರು.

> ರಾಣೇಬೆನ್ನೂರಿನ ವೃತ್ತಗಳ ಅಭಿವೃದ್ಧಿ, ಸಿಸಿ ಕ್ಯಾಮರಾಗಳ ಅಳವಡಿಕೆ, ಬೀದಿ ವ್ಯಾಪಾರಸ್ಥರಿಗೆ ಸೌಲಭ್ಯ, ಕ್ರೀಡೆಗಳಿಗೆ ಪ್ರೋತ್ಸಾಹ.
>
> - ಚಂಪಕ ಬಿಸಲಳ್ಳಿ
> ಅಧ್ಯಕ್ಷರು, ನಗರಸಭೆ, ರಾಣೇಬೆನ್ನೂರು

ರಾಜ್ಯದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ನಗರಕ್ಕೆ ಆಸ್ಪತ್ರೆ, ಶಿಕ್ಷಣ, ವ್ಯವಹಾರ, ಉದ್ಯೋಗ, ಕಚೇರಿ ಕೆಲಸಗಳಿಗಾಗಿ ಪ್ರತಿದಿನ ಸಾವಿರಾರು ಜನರು ಬಂದು ಹೋಗುತ್ತಿದ್ದಾರೆ. ಅವರಿಗೆ ಹಾಗೂ ನಗರದ ನಾಗರಿಕರಿಗೆ ಮೂಲಭೂತ ಸೌಕರ್ಯ ಒದಗಿಸುವುದು ನಗರ ಸಭೆಯ ಆದ್ಯ ಕರ್ತವ್ಯವಾಗಿದ್ದು, ಅದನ್ನು ಗಮನದಲ್ಲಿಟ್ಟುಕೊಂಡು, ನಾಗರಿಕರ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಬಜೆಟ್ ಮಂಡಿಸಿರುವುದಾಗಿ ಅಧ್ಯಕ್ಷೆ ಚಂಪಕ ವಿವರಿಸಿದರು.

ನಗರಸಭೆ ಮಾಲ್ಕಿ ಆಸ್ತಿ ತೆರಿಗೆ, ನೀರಿನ ಕರ, ಅಭಿವೃದ್ಧಿ ಕರ, ಮಳಿಗೆ ಬಾಡಿಗೆ ಹಾಗೂ ಇತರೆ ಶುಲ್ಕಗಳ 22 ಕೋಟಿ ಜೊತೆಗೆ ಎಸ್.ಎಫ್.ಸಿ ನಿಧಿ, ವಿದ್ಯುತ್ ಅನುದಾನ, ವೇತನ ಅನುದಾನ, ಕೇಂದ್ರದ ಹಣಕಾಸು ಯೋಜನೆ ಹಣ, ಶಾಸಕರ ಅನುದಾನ ಸೇರಿದಂತೆ 40 ಕೋಟಿಯಷ್ಟು ಆದಾಯ ನಿರೀಕ್ಷೆಯಿದ್ದು, ಧೂಳುಮುಕ್ತ ನಗರ ನಿರ್ಮಾಣಕ್ಕೆ 7 ಕೋಟಿ, ನೀರು ಸರಬರಾಜಿಗೆ 4 ಕೋಟಿ, ಬೀದಿ ದೀಪಗಳ ಅಳವಡಿಕೆಗೆ 2 ಕೋಟಿ, ಘನ ತ್ಯಾಜ್ಯ ನಿರ್ವಹಣೆಗೆ 2 ಕೋಟಿ ರೂ. ನಿಗದಿ ಪಡಿಸಿದೆ.

ಚರಂಡಿ, ರಸ್ತೆ ಹಾಗೂ ಕಟ್ಟಡ ದುರಸ್ತಿ, ಅಂಗನವಾಡಿ ಕಟ್ಟಡ ನಿರ್ಮಾಣ, ಬಸ್ ತಂಗುದಾಣ ನಿರ್ಮಾಣ, ಉದ್ಯಾನವನ ಹಾಗೂ ವೃತ್ತಗಳ ಅಭಿವೃದ್ಧಿ, ಸಿಸಿ ಕ್ಯಾಮರಾಗಳ ಅಳವಡಿಕೆ, ಜಾಹೀರಾತು ಫಲಕ ನಿರ್ಮಾಣ, ಶೌಚಾಲಯ ನಿರ್ಮಾಣ, ಬೀದಿ ವ್ಯಾಪಾರಸ್ಥರಿಗೆ ಸೌಲಭ್ಯ ಒದಗಿಸುವುದು, ಕಲೆ-ಸಂಸ್ಕೃತಿ, ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವುದು, ಪೌರ ಕಾರ್ಮಿಕರ ಅಧ್ಯಯನ ಪ್ರವಾಸ ಈ ಎಲ್ಲ (5ನೇ ಪುಟಕ್ಕೆ)

# ಹಸಿವು ತಣಿಸುವುದು ಪುಣ್ಯದ ಕಾರ್ಯ



### ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ, ಫೆ.20- ಹಸಿದವರಿಗೆ ಅನ್ನ ಹಾಕುವುದು ಪುಣ್ಯದ ಕೆಲಸ, ಇದಕ್ಕಿಂತ ಮಹತ್ಕಾರ್ಯ ಮತ್ತೊಂದಿಲ್ಲ ಎಂದು ಶಾಸಕರಾದ ಶ್ರೀಮತಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಕೆಹೆಚ್‌ಬಿ ಕಾಲೋನಿಯ ನಿವೃತ್ತ ಬಿಎಸ್‌ಎನ್‌ಎಲ್ ನೌಕರ ಕೆ.ಆರ್. ಸುಧಾಕರ್ ಮತ್ತು ಕುಟುಂಬಸ್ಥರು ಕೊಟ್ಟೂರಿಗೆ ಹೊರಟ ಪಾದಯಾತ್ರಿಗಳಿಗೆ ಏರ್ಪಡಿಸಿದ್ದ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತೀಯ ಸಂಸ್ಕೃತಿಯಲ್ಲಿ ಅನ್ನದಾನಕ್ಕೆ ಮಹತ್ವದ ಸ್ಥಾನವಿದೆ. ಜಾತಿ-ಮತದ ಭೇದ ಇಲ್ಲದೇ ಭಕ್ತಿಯಿಂದ ಅನ್ನ ಸಂತರ್ಪಣೆ ಕಾರ್ಯ ಮಾಡುತ್ತಿರುವುದು ಸಂತಸದ ಸಂಗತಿ ಎಂದರು.

ಹಸಿದು ಬಂದವರಿಗೆ ಅನ್ನ ಹಾಕಬೇಕು ಎನ್ನುವ ಉದ್ದೇಶದಿಂದ ಹಿಂದಿನ ಕಾಲದಲ್ಲಿನ ಮಾತೆಯರು ಅಡುಗೆ ಮಾಡುವಾಗ ಒಂದು ಹಿಡಿ ಅಕ್ಕಿಯನ್ನು ಹೆಚ್ಚಾಗಿ ಹಾಕುತ್ತಿದ್ದರು ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಮಾತನಾಡಿ, ಒತ್ತಡದ ಬದುಕಿನಲ್ಲಿ ಭಕ್ತಿ ಮಾರ್ಗದಲ್ಲಿ ನಡೆದರೆ ಶಾಂತಿ, ನೆಮ್ಮದಿ ದೊರಕುತ್ತದೆ. ಧರ್ಮದ ತಳಹದಿಯ ಮೇಲೆ ಜೀವನ ಸಾಗಿಸಬೇಕು. ರಾಗ-ದ್ವೇಷ ತೊರೆದು ಮಾನವೀಯ ಮೌಲ್ಯ ಬೆಳೆಸಿಕೊಂಡರೆ ಕೊಟ್ಟೂರು ದೊರೆಯ ಆಶೀರ್ವಾದ ಸದಾ ಇರುತ್ತದೆ ಎಂದರು.

ಬಿಎಸ್ಸೆನ್ನೆಲ್ ನಿವೃತ್ತ ನೌಕರ ಕೆ.ಆರ್ ಸುಧಾಕರ್ ಮಾತನಾಡಿ, ಕೊಟ್ಟೂರು ಜಾತ್ರೆಗೆ ಹೊರಡುವ ಪಾದಯಾತ್ರಿಗಳಿಗೆ 18 ವರ್ಷಗಳಿಂದ ಅನ್ನ (5ನೇ ಪುಟಕ್ಕೆ)

# ಕೊಮಾರನಹಳ್ಳಿ ಬಳಿ ಹೆಚ್ಚಾಗದ ನೀರಿನ ಗೇಜ್ : ಕೊನೆ ಭಾಗಕ್ಕೆ ಸಮರ್ಪಕವಾಗಿ ಹರಿಯದ ನೀರು



ಮಲೇಬೆನ್ನೂರು, ಫೆ.20- ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ಜಮೀನುಗಳಿಗೆ ಇನ್ನೂ ಸಮರ್ಪಕವಾಗಿ ನೀರು ಹರಿದು ಬರುತ್ತಿಲ್ಲ ಎಂದು ರೈತರು ಬೇಸರ ವ್ಯಕ್ತಪಡಿಸಿದ್ದಾರೆ.

ನೀರು ಹರಿಸುವ ಕುರಿತು ನಾವು ಎಷ್ಟು ಪ್ರತಿಭಟನೆಗಳನ್ನು ಮಾಡಿದ್ದರೂ ಸಹ ಇದುವರೆಗೆ ನಮ್ಮ ಭಾಗಕ್ಕೆ ಭದ್ರಾ ಕಾಡಾ ಅಧ್ಯಕ್ಷರಾಗಲೀ, ಜಿಲ್ಲಾ ಉಸ್ತುವಾರಿ ಸಚಿವರಾಗಲೀ, ಸಂಸದರಾಗಲೀ, ಶಾಸಕರಾಗಲೀ, ಜಿಲ್ಲಾಧಿಕಾರಿಗಳಾಗಲೀ ಒಮ್ಮೆಯೂ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿಲ್ಲ ಎಂದು ಕೊನೆ ಭಾಗದ ರೈತರು ದೂರಿದ್ದಾರೆ.

ಮಂಗಳವಾರ ಮಲೇಬೆನ್ನೂರಿನಲ್ಲಿ ಭದ್ರಾ ಅಧೀಕ್ಷಕ ಇಂಜಿನಿಯರ್ ಅವರು ಇಂಜಿನಿಯರ್‌ಗಳಿಗೆ ನಮ್ಮ ಸಮ್ಮುಖದಲ್ಲೇ ನೀರಿನ ಗೇಜ್ ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಹೇಳಿದರು. ಆದರೆ, ಕೊಮಾರನಹಳ್ಳಿ ಬಳಿ ಕಾಲುವೆಯಲ್ಲಿ ಗುರುವಾರ 4.6 ಅಡಿ ನೀರು ಮಾತ್ರ ಹರಿಯುತ್ತಿದೆ ಎಂದು ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬೇಸರ ವ್ಯಕ್ತಪಡಿಸಿದರು.

ಕೊನೆ ಭಾಗದ ಎಲ್ಲಾ ರೈತರಿಗೆ ನೀರು ಸಿಗಬೇಕಾದರೆ ಕನಿಷ್ಠ 5 ಅಡಿ ನೀರು ಹರಿಸಬೇಕೆಂದು ಶ್ರೀನಿವಾಸ್ ಅವರು ಇಂಜಿನಿಯರ್‌ಗಳಿಗೆ ಫೋನ್ ಮೂಲಕ ಒತ್ತಾಯಿಸಿದರು.

ಇಷ್ಟೆಲ್ಲಾ ಸಮಸ್ಯೆ ಇದ್ದರೂ ಸಹ ಭದ್ರಾ ಕಾಡಾ ಅಧ್ಯಕ್ಷರು ಇತ್ತ ಕಡೆ ಮುಖ ಮಾಡದಿರುವುದು ತುಂಬಾ ನೋವಿನ ಸಂಗತಿ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್ ಹೇಳಿದರು.

ಬೇಸಿಗೆ ಸಮಯ ಆಗಿರುವುದರಿಂದ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದ್ದು, ಜಿಲ್ಲಾಡಳಿತ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಕೊನೆ ಭಾಗಕ್ಕೆ ನೀರು ಹರಿಸಲು ಗಮನ ಹರಿಸುವಂತೆ ಹೊಸಳ್ಳಿ ದ್ಯಾವಪ್ಪ ರೆಡ್ಡಿ, ಹೊಳೆಸಿರಿಗೆರೆಯ ತಿಪ್ಪೇರುದ್ರಪ್ಪ, ಪಾಲಾ ಕ್ಷಪ್ಪ, ಭಾನುವಳ್ಳಿಯ ಹೆಚ್. ಕೆ.ನಾರಾಯಣಪ್ಪ, ಗುತ್ತೈಪ್ಪ ಮತ್ತಿತರರು ಆಗ್ರಹಿಸಿದ್ದಾರೆ.

# ಹಳೇಪೇಟೆ ಸರ್ಕಾರಿ ಶಾಲೆಯಲ್ಲಿ ಎಫ್‌ಎಲ್‌ಎನ್ ಕಲಿಕಾ ಹಬ್ಬ






ದಾವಣಗೆರೆ, ಫೆ.20- ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಕಲಿಕಾ ಹಬ್ಬವು ಸ್ಥಳೀಯ ಹಳೇಪೇಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಜರುಗಿತು. ಕ್ಲಸ್ಟರ್‌ನ ಸರ್ಕಾರಿ ಶಾಲೆಗಳಿಂದ ಒಂದರಿಂದ ಐದನೇ ತರಗತಿಯ ನೂರಕ್ಕೂ ಹೆಚ್ಚು ಮಕ್ಕಳು ಹಬ್ಬದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರೂ ಆದ ಹಿರಿಯ ಪತ್ರಿಕಾ ಪ್ರತಿನಿಧಿ ಕೋಡುಬಾಳು ಚನ್ನಬಸಪ್ಪ ಉದ್ಘಾಟಿಸಿದರು. ಡಯಟ್ ಹಿರಿಯ ಉಪನ್ಯಾಸಕ ದಾರುಕೇಶ್ ಅವರು ಕಲಿಕಾ ಹಬ್ಬದ ಮಹತ್ವವನ್ನು ತಿಳಿಸಿದರು.

ಸಿ.ಆರ್.ಪಿ. ಮಲ್ಲಿಕಾರ್ಜುನ ಕುಂದುವಾಡ ಅವರು ಕಲಿಕಾ ಹಬ್ಬದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಶಿಕ್ಷಕ ಲೋಕಣ್ಣ ಮಾಗೋಡ್ರ ಕಲಿಕಾ ಹಬ್ಬದ ಚಟುವಟಿಕೆಗಳ ಕುರಿತು ಎಲ್ಲರ ಗಮನ ಸೆಳೆದರು.

ನಂತರ ಕಲಿಕಾ ಹಬ್ಬದ ಏಳು ಚಟುವಟಿಕೆಗಳಾದ ಗಟ್ಟಿ ಓದು, ಕಥೆ ಹೇಳುವುದು, ಕೈಬರಹ ಮತ್ತು ಕ್ಯಾಲಿಗ್ರಫಿ, ಸಂತೋಷದಾಯಕ ಗಣಿತ, ರಸ ಪ್ರಶ್ನೆ, ಪೋಷಕರು ಮತ್ತು ಮಕ್ಕಳ ಸಹ ಸಂಬಂಧ ಈ ಚಟುವಟಿಕೆಗಳಿಗೆ ಸ್ಪರ್ಧೆಗಳು ನಡೆದು ಕೊನೆಯಲ್ಲಿ ಗೆದ್ದಂತಹ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

# ಓದುವ ಹವ್ಯಾಸ ಜ್ಞಾನ ವೃದ್ಧಿಸಲಿದೆ : ಬಾಮ



**ಹರಿಹರ**

ಹರಿಹರ, ಫೆ.20- ವಿದ್ಯಾರ್ಥಿಗಳು ಓದುವ ಹವ್ಯಾಸ ಬೆಳೆಸಿಕೊಂಡರೆ ಅಗಾಧ ಜ್ಞಾನ ಸಂಪಾದಿಸಬಹುದು ಎಂದು ಹಿರಿಯ ಸಾಹಿತಿ ಬಾ.ಮ ಬಸವರಾಜಯ್ಯ ಪ್ರತಿಪಾದಿಸಿದರು.

ನಗರದ ಎಂ.ಕೆ.ಇ.ಟಿ. ಸಿಬಿಎಸ್ ಶಾಲೆಯಲ್ಲಿ ಗುರುವಾರ ನಡೆದ ಗ್ರಂಥಾಲಯ ದಿನಾಚರಣೆ ಮತ್ತು ಗ್ರಂಥಾಲಯ ಸಪ್ತಾಹಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಕೇವಲ ಪಠ್ಯಗಳನ್ನಷ್ಟೇ ಓದದೇ, ಅನೇಕ ಹಿರಿಯ ಸಾಹಿತಿಗಳ ಕೃತಿ ಹಾಗೂ ಗ್ರಂಥಗಳನ್ನು ಓದಬೇಕು ಎಂದು ಮಕ್ಕಳಿಗೆ ಕಿವಿಮಾತು ಹೇಳಿದರು.

ಬಾಲ್ಯದಿಂದಲೇ ಓದುವ ಹವ್ಯಾಸ ಬೆಳೆಸಿಕೊಂಡರೆ ಸಮಾಜದಲ್ಲಿ ಉನ್ನತ ಹುದ್ದೆ ಅಲಂಕರಿಸಬಹುದು. ಓದು ಮಕ್ಕಳಲ್ಲಿ ಜಾಣ್ಮೆ, ಕ್ರಿಯಾಶೀಲತೆ ಹಾಗೂ ಬೌದ್ಧಿಕ ಶಕ್ತಿಯನ್ನು ಇಮ್ಮಡಿಗೊಳಿಸುತ್ತದೆ ಎಂದು ತಿಳಿಸಿದರು.

ಶಾಲೆಯ ಆಡಳಿತಾಧಿಕಾರಿ ಡಾ.ಬಿ.ಟಿ ಅಚ್ಯುತ್ ಮಾತನಾಡಿ, ಆಧುನಿಕ ತಂತ್ರಜ್ಞಾನದಿಂದ ವಿದ್ಯಾರ್ಥಿಗಳು ಗೂಗಲ್ ಶೋಧಕ್ಕೆ ಬಲಿಯಾಗುತ್ತಿದ್ದಾರೆ. ಇದು ಪರಿಪೂರ್ಣ ಜ್ಞಾನ ನೀಡುವುದಿಲ್ಲ ಎಂದು ಹೇಳಿದರು.

ಶಾಲೆಯ ಮುಖ್ಯ ಶಿಕ್ಷಕ ಮಂಜುನಾಥ ಕುಲಕರ್ಣಿ ಮಾತನಾಡಿ, ಓದುವ ಆಸಕ್ತಿ ಇರುವ ಮಕ್ಕಳಿಗೆ ಇಲ್ಲಿ ಪೂರಕ ವಾತಾವರಣ ನಿರ್ಮಿಸಲಾಗಿದ್ದು, ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಲಾ ಗ್ರಂಥ ಪಾಲಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

# ಜಿಲ್ಲಾ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಹಕಾರ ಸಂಘ ನಿಗಮ ಸ್ಥಾಪನೆ

ದಾವಣಗೆರೆ, ಫೆ.20- ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ವಿವಿಧ ನಿಗಮ, ಮಂಡಳಿ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು, ಕಾರ್ಮಿಕರಿಗೆ ವೇತನ ಪಾವತಿ ಮತ್ತು ಕಾನೂನಾತ್ಮಕವಾಗಿ ನೀಡಬೇಕಾದ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ದಾವಣಗೆರೆ ಜಿಲ್ಲಾ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಹಕಾರ ಸಂಘ ನಿಗಮವನ್ನು ನೂತನವಾಗಿ ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿ ಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ಈಗಾಗಲೇ ವಿವಿಧ ಸಂಸ್ಥೆಗಳ ಮೂಲಕ ಹೊರಗುತ್ತಿಗೆಯಡಿ ಟೆಂಡರ್ ಮೂಲಕ ಸೇವೆಯನ್ನು ಸಲ್ಲಿಸಲಾಗುತ್ತಿದ್ದು, ಈ ಎಲ್ಲಾ ಹೊರಗುತ್ತಿಗೆ ನೌಕರರು ಇನ್ನು ಮುಂದೆ ಜಿಲ್ಲಾ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಹಕಾರ ಸಂಘದಡಿಯಲ್ಲಿ ಕೆಲಸ ನಿರ್ವಹಿಸುವರು. ಈ ನೌಕರರಿಗೆ ಜಿಲ್ಲಾ ಸಂಘದಿಂದಲೇ ನೇರವಾಗಿ ವೇತನ ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗುತ್ತದೆ. ಹೊರಗುತ್ತಿಗೆ ನೌಕರರು ಈ ಸಹಕಾರ ಸಂಘದ ಸದಸ್ಯರಾಗಿರುವರು.

ಹೊರಗುತ್ತಿಗೆ ನೌಕರ ಸಿಬ್ಬಂದಿಯವರು ಸಂಘದ ಸದಸ್ಯತ್ವ ಪಡೆಯಬಹುದಾಗಿದ್ದು, ತಮ್ಮ ಇಲಾಖೆ ಮುಖ್ಯಸ್ಥರುಗಳಿಂದ ಅರ್ಜಿ ಪಡೆದು ನೋಂದಣಿ ಮಾಡಿಕೊಳ್ಳಲು ತಿಳಿಸಿದ್ದಾರೆ.

# ಸಚಿವರಿಂದ ಜಲಸಿರಿ ನೀರು ಶುದ್ಧೀಕರಣ ಘಟಕದ ಪ್ರಗತಿ ಪರಿಶೀಲನೆ



ದಾವಣಗೆರೆ, ಫೆ.20- ಮಹಾನಗರ ಪಾಲಿಕೆಯ ಜಲಸಿರಿ ಯೋಜನೆಯಡಿಯಲ್ಲಿ ಬಾತಿಯಲ್ಲಿ ನಿರ್ಮಾಣಗೊಂಡಿರುವ ನೀರು ಶುದ್ಧೀಕರಣ ಘಟಕ ಡಬ್ಲ್ಯೂಟಿಪಿ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಪ್ರಗತಿ ಪರಿಶೀಲನೆ ನಡೆಸಿ, ಪರೀಕ್ಷಾರ್ಥ ಕಾರ್ಯಾರಂಭಗೊಳಿಸಿದರು. ಪೂರ್ಣ ಪ್ರಮಾಣದ ಕಾರ್ಯಾರಂಭಕ್ಕೆ ಅಗತ್ಯವಿರುವ ಕೆಲಸಗಳನ್ನು ಒಂದು ತಿಂಗಳೊಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಈ ಕಾಮಗಾರಿಯಿಂದ ನಗರಕ್ಕೆ 40 ಎಂ.ಎಲ್.ಡಿ ನೀರು ಅಧಿಕವಾಗಿ ಪೂರೈಸಲು ಸಹಕಾರಿಯಾಗುತ್ತದೆ. ಅಲ್ಲದೇ ಕುಂದುವಾಡ ಕೆರೆಯಿಂದ ಪ್ರತಿದಿನ ಪೂರೈಸಲಾಗುತ್ತಿರುವ ಪ್ರಮಾಣವನ್ನು ಕಡಿತಗೊಳಿಸಿ, ಬೇಸಿಗೆಗೆ ನೀರನ್ನು ಶೇಖರಿಸಿಡಲು ಸಾಧ್ಯವಾಗಿದೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಿ ಜನತೆಗೆ ಅನುಕೂಲವಾಗುವಂತೆ ಕ್ರಮ ವಹಿಸಲು ನಿರ್ದೇಶಿಸಿದರು.

ಈ ಸಂದರ್ಭದಲ್ಲಿ ಹಾಜರಿದ್ದ ನಗರ ಯೋಜನೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಹುಲ್ಲುಮನೆ ಗಣೇಶ್ ಅವರು, ಬಾತಿ ನೀರು ಶುದ್ಧೀಕರಣ ಘಟಕ ಕಾಮಗಾರಿ ಹಲವು ವರ್ಷಗಳಿಂದ ಪ್ರಗತಿ ಕಂಡಿರಲಿಲ್ಲ. ಇದೀಗ ಸಚಿವರ ಮಾರ್ಗದರ್ಶನದಲ್ಲಿ ಆ ಕೆಲಸ ಆಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಮಹಾಪೌರರಾದ ಚಮನ್ ಸಾಬ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಆಶಾ ಉಮಾಶಂಕರ್, ಸುಧಾ ಇಟ್ಟಿಗುಡಿ ಮಂಜುನಾಥ್, ಪಾಲಿಕೆ ಆಯುಕ್ತರಾದ ರೇಣುಕಾ ಮತ್ತು ಇತರೆ ಅಧಿಕಾರಿಗಳು ಹಾಜರಿದ್ದರು.

# ಶಿವರಾತ್ರಿ ಉತ್ಸವ : ದಾವಣಗೆರೆ ಪ್ರತಿಭೆಗಳ ಕಲಾ ಸ್ಪರ್ಧೆಗಳು



ದಾವಣಗೆರೆ, ಫೆ. 20 - ನಗರದ ಶ್ರೀ ವಿನಾಯಕ ಎಜುಕೇಶನ್ ಟ್ರಸ್ಟ್, ಅಥಣಿ ಕಾಲೇಜು ಹಾಗೂ 'ಚಿರಂತನ ಅಕಾಡೆಮಿ' ಸಹಯೋಗದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.


ಆಯ್ಕೆಯಾದ ಪ್ರತಿಭೆಗಳಿಗೆ ಇದೇ ದಿನಾಂಕ 26 ಶಿವರಾತ್ರಿಯಂದು ಸಂಜೆ 7.30ರಿಂದ ರಾತ್ರಿ 11.30ರವರೆಗೆ ಎಸ್.ಎಸ್. ಬಡಾವಣೆಯಲ್ಲಿ ದಾವಣಗೆರೆಯ ಅತೀ ಎತ್ತರದ 'ಶಿವ ಮೂರ್ತಿ' ಇರುವ ಅಥಣಿ ಕಾಲೇಜಿನ ಆವರಣದಲ್ಲಿ ಭವ್ಯ ವೇದಿಕೆ ಕಲ್ಪಿಸಲಾಗುತ್ತದೆ.

ಸೋಲೋ ಅಥವಾ ತಂಡಗಳು ಭಾಗವಹಿಸಬಹುದು. 3 ರಿಂದ 10 ವರ್ಷದೊಳಗಿನ ಮಕ್ಕಳಿಗೆ 'ಶಿವ ಪುರಾಣ'ದ ಯಾವುದೇ ಪಾತ್ರಗಳ ವೇಷಭೂಷಣ ಸ್ಪರ್ಧೆ, ವಚನ ಗಾಯನ ಮತ್ತು ಶ್ಲೋಕಗಳ ಸ್ಪರ್ಧೆ ನಡೆಯಲಿದೆ. 6 ರಿಂದ 16 ವರ್ಷ ಹಾಗೂ 16 ವರ್ಷ ಮೇಲ್ಪಟ್ಟ ವಿಭಾಗಗಳಲ್ಲಿ ಭರತನಾಟ್ಯ, ಭಕ್ತಿ ನೃತ್ಯ, ಭಕ್ತಿಗೀತೆ ಗಾಯನ ಸ್ಪರ್ಧೆ ನಡೆಯಲಿದ್ದು, ತಮ್ಮ ಕಲಾ ಪ್ರದರ್ಶನ ವಿಡಿಯೋವನ್ನು ವಾಟ್ಸಾಪ್ ಮುಖಾಂತರ 'ಚಿರಂತನ' ಕ್ಕೆ 9535656163ಗೆ ಕಳುಹಿಸಬೇಕು. ತೀರ್ಪುಗಾರರು ಆಯ್ಕೆ ಮಾಡುವ ತಂಡ ಅಥವಾ ಸೋಲೋ ಪ್ರತಿಭೆಗಳಿಗೆ ಪ್ರಮಾಣ ಪತ್ರ, ಬಹುಮಾನವನ್ನು ನೀಡಲಾಗುವುದು.

ಶಿವ ಭಕ್ತಿಯೊಂದಿಗೆ ನೃತ್ಯ ಸಂಗೀತ ಸೇವೆಯನ್ನು ಮಾಡುವ ಅವಕಾಶ ಈ ಬಾರಿ ಕಲ್ಪಿಸಲಾಗಿದ್ದು, ದಾವಣಗೆರೆ ಪ್ರತಿಭೆಗಳನ್ನು ಗುರುತಿಸಲಾಗುತ್ತಿದೆ. ನಿಮ್ಮ ವಿಡಿಯೋ ಅಡಿಷನ್‌ಗೆ ಕಳುಹಿಸಲು ಇದೇ ದಿನಾಂಕ 22 ಕೊನೆಯ ದಿನವಾಗಿದೆ.

# ನಗರದಲ್ಲಿ ನಾಡಿದ್ದು ಸಿದ್ಧ ಕಣ್ಣಿನ ಹನಿ

ದಾವಣಗೆರೆ, ಫೆ. 20 - ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ನಾಡಿದ್ದು ದಿನಾಂಕ 23 ರ ಭಾನುವಾರ



ಬೆಳಿಗ್ಗೆ 10 ರಿಂದ 12 ರವರೆಗೆ ಹಾಗೂ ಹರಿಹರ ಸಮೀಪದ ಕೋಡಿಯಾಲ - ಹೊಸಪೇಟೆಯ ಪುಣ್ಯಕೋಟಿ ಮಠದಲ್ಲಿ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸ ಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ. ಮೋಕ್ಷಾನಂದ, ಬಿ.ಎಸ್. ವೀರೇಶ್ (88676 - 91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್. ಅಶೋಕ್ ಕುಮಾರ್ (95917 76643) ಹರಿಹರ ಎಂ.ಹೆಚ್. ಶಿವಯೋಗೀಶ್ವರ ಸ್ವಾಮಿ (94483 39424) ಅವರನ್ನು ಸಂಪರ್ಕಿಸಬಹುದು.

# ಕ್ಷತ್ರಿಯ ಮರಾಠ ಸಮಾಜದ ನೂತನ ಭವಾನಿ ಕಲ್ಯಾಣ ಮಂಟಪದ ಉದ್ಘಾಟನೆ

**ನಗರದಲ್ಲಿ ಇಂದು**

ಜಿಲ್ಲಾ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ವತಿಯಿಂದ ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿ ನೂತನ 'ಭವಾನಿ ಕಲ್ಯಾಣ ಮಂಟಪ' ಉದ್ಘಾಟನೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಸಂಘದ ಗೌರವಾಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದರು.

ಬೆಂಗಳೂರಿನ ಗವಿಪುರಂ ಗೋಸಾಯಿ ಮಠದ ಮಂಜುನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಸಂಘದ ಡಿ. ಮಾಲತೇಶ್ ಜಾಧವ್ ಅಧ್ಯಕ್ಷತೆ ವಹಿಸುವರು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಕಾರ್ಮಿಕ ಸಚಿವ ಸಂತೋಷ್ ಲಾಡ್, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಗೃಹ ಮಂತ್ರಿ ಪಿ.ಜಿ.ಆರ್. ಸಿಂಧ್ಯಾ, ಶಾಸಕ ಶ್ರೀನಿವಾಸ್ ಮಾನೆ, ಎಂ.ಜಿ. ಮೂಳೆ, ಮಾಜಿ ಸಚಿವ ಹೆಚ್. ಆಂಜನೇಯ ಹಾಗೂ ಡಾ. ಪ್ರಕಾಶ್ ಪಾಗೋಜಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

# ಪಾದಯಾತ್ರಿಗಳಿಗೆ ನೀರು ವಿತರಣೆ




ಹರಿಹರ, ಫೆ.20- ಕೊಟ್ಟೂರೇಶ್ವರ ಜಾತ್ರೆಗೆ ದಿನಗಣನೆ ಶುರುವಾಗಿದ್ದು, ಫೆ.22ರಂದು ನಡೆಯುವ ಸ್ವಾಮಿ ರಥೋತ್ಸವಕ್ಕೆ ಹೊರಟ ಪಾದಯಾತ್ರಿಗಳಿಗೆ ನಗರದ ಭರಂಪುರ ಯುವಕ ಸಂಘದವರು ಯಾತ್ರಿಗಳಿಗೆ ಶುದ್ಧ ಕುಡಿಯುವ ನೀರಿನ ಬಾಟಲ್ ವಿತರಿಸಿ, ಭಕ್ತಿ ಸಮರ್ಪಿಸಿದರು. ಈ ಸಂದರ್ಭದಲ್ಲಿ ಶಂಭುಲಿಂಗಸ್ವಾಮಿ ಡಿಷ್, ಕೊಟ್ರೇಶ್ ಹುಲಿಕಟ್ಟಿ, ರುದ್ರೇಶ್ ದಾವಣಗೆರೆ, ನಾಗರಾಜ್ ಪೂಜಾರ್, ಕೆ.ಬಿ. ಚಂದ್ರಶೇಖರ್, ಗಿರೀಶ್ ಇತರರು ಹಾಜರಿದ್ದರು.

# ರಾಹುಲ್ ಮೈತ್ರಿ ಪ್ರಸ್ತಾಪಕ್ಕೆ ಮಾಯಾವತಿ ನಕಾರ

ಲಕ್ನೌ,ಫೆ.20 - ಬಿಜೆಪಿ ವಿರುದ್ಧ ಹೋರಾಟ ನಡೆಸಲು ಮೈತ್ರಿ ಮಾಡಿಕೊಳ್ಳಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮುಂದಿಟ್ಟ ಪ್ರಸ್ತಾಪವನ್ನು ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ತಳ್ಳಿ ಹಾಕಿದ್ದಾರೆ.

ಕಾಂಗ್ರೆಸ್ ಪಕ್ಷ ಜಾತಿವಾದಿ ಮನೋಭಾವ ಹೊಂದಿದೆ ಹಾಗೂ ದ್ವಿಮುಖ ಧೋರಣೆ ಅನುಸರಿ ಸುತ್ತಿದೆ ಎಂದು ಮಾಯಾವತಿ ಆರೋಪಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಬಲವಾಗಿರುವ ಇಲ್ಲವೇ ಅಧಿಕಾರದಲ್ಲಿರುವ ಕಡೆಗಳಲ್ಲಿ ಬಿಎಸ್‌ಪಿ ಬಗ್ಗೆ ದ್ವೇಷ ಹಾಗೂ ಜಾತಿವಾದಿ ಮನೋಭಾವ ತೋರಿಸುತ್ತದೆ. ಆದರೆ ದುರ್ಬಲವಾಗಿರುವ ಉತ್ತರ ಪ್ರದೇಶದಂತಹ ರಾಜ್ಯಗಳಲ್ಲಿ ಮೈತ್ರಿ ಬಗ್ಗೆ ಮಾತನಾಡಿ ಜನರ ದಿಕ್ಕು ತಪ್ಪಿಸುತ್ತಿದೆ. ಇದು ಮಿಥ್ಯಾಚಾರ ಎಂದು ಮಾಯಾವತಿ ಹೇಳಿದ್ದಾರೆ. ಮಾಯಾವತಿ ಅವರು ನಮ್ಮ ಜೊತೆ ಸೇರಿ ಬಿಜೆಪಿ ವಿರುದ್ಧ ಹೋರಾಡ ಬೇಕು ಎಂದು ನಾನು ಬಯಸಿದ್ದೆ. ಆದರೆ ಅವರು ಇದಕ್ಕೆ ಒಪ್ಪಿಲ್ಲ. ಇದರಿಂದಾಗಿ ತೀವ್ರ ನಿರಾಸೆಯಾಗಿದೆ ಎಂದು ರಾಹುಲ್ ಗಾಂಧಿ ಹೇಳಿದ್ದರು.

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಚಿರಡೋಣಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ**

ಕ್ರ. ಸಂಖ್ಯೆ : ಗ್ರಾಪಂ.ಚಿ/ಇಟೆಂಡರ್/2024-25 ದಿನಾಂಕ :- 19.02.2025

**'ಇ-ಪ್ರಕ್ಯೂರ್ ಮೆಂಟ್' ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ**

ಈ ಕಛೇರಿಯಿಂದ 2024-25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ ಚಿರಡೋಣಿ, ಚನ್ನಗಿರಿ ತಾಲ್ಲೂಕು ದಾವಣಗೆರೆ ಜಿಲ್ಲೆ ಇವರು ಲೋಕೋಪಯೋಗಿ ಇಲಾಖೆ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರ / ಸಾಮಗ್ರಿ ಸರಬರಾಜುದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Tender Document for E-procurement for Goods ನಮೂನೆಯಲ್ಲಿ (K/H-2) ಆಹ್ವಾನಿಸಲಾಗಿದೆ.

| ಕ್ರ.ಸಂ. | ಕಾಮಗಾರಿ ಹೆಸರು | ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ) |
|---|---|---|
| 1 | ಚಿರಡೋಣಿ ಗ್ರಾಮದ ನಾಲ್ಕು ವಾರ್ಡ್‌ಗಳಿಗೆ ಬೀದಿದೀಪ ನಿರ್ವಹಣೆ RDPR/2024-25/SE2105 | 306851-00 |
| 2 | ಚಿರಡೋಣಿ ಗ್ರಾಮ ಪಂಚಾಯಿತಿಯ ಹೈಮಾಸ್ಟ್ ಲೈಟ್ ದುರಸ್ತಿ ಮತ್ತು ಸಾಮಗ್ರಿ ಖರೀದಿ RDPR/2024-25SE2107 | 150000-00 |
| 3 | ಚಿರಡೋಣಿ ಗ್ರಾಮದ ಕುಡಿಯುವ ನೀರಿನ ಮೋಟಾರ್ ಬಿಡಿಭಾಗಗಳ ಸಾಮಗ್ರಿ ಖರೀದಿ RDPR/2024-25IND7029 | 550000-00 |
| 4 | ಚಿರಡೋಣಿ ಗ್ರಾಮದ ಕುಡಿಯುವ ನೀರಿನ ಬಿಡಿಭಾಗಗಳ ಸಾಮಾಗ್ರಿ ಖರೀದಿ RDPR/2024-25IND7027 | 398729-00 |

**ಇ-ಟೆಂಡರ್ ವೇಳಾಪಟ್ಟಿ**

| | | |
|---|---|---|
| 1 | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1 ಮತ್ತು ಅನುಬಂಧ - 2ನ್ನು) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ & ಸಮಯ | ದಿನಾಂಕ : 19-02-2025 ರಿಂದ 26.02.2025ರವರೆಗೆ |
| 2 | ಇ-ಪೋರ್ಟಲ್‌ನಲ್ಲಿ ಟೆಂಡರನ್ನು ಇಂಡೀಕರಿಸಲು ಕೊನೆಯ ದಿನಾಂಕ | ದಿನಾಂಕ : 26-02-2025 ಸಂಜೆ 5.30 ಗಂಟೆಯವರೆಗೆ |
| 3 | ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ / ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ : 28-02-2025 ಬೆಳಿಗ್ಗೆ 11 ಗಂಟೆಗೆ |
| 4 | ಈ ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಚೇರಿ ವಿವರ | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ, ಚಿರಡೋಣಿ. |

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ www.kppp.karnataka.gov.in ನೋಡಿಕೊಳ್ಳುವುದು. ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

ಸಹಿ/- **ಅಧ್ಯಕ್ಷರು** ಗ್ರಾಮ ಪಂಚಾಯಿತಿ. ಚಿರಡೋಣಿ.

ಸಹಿ/- **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು** ಗ್ರಾಮ ಪಂಚಾಯಿತಿ, ಚಿರಡೋಣಿ.

# ಭಾರತಕ್ಕೆ 20 ಸಾವಿರ ಪೈಲೆಟ್‌ಗಳ ಅಗತ್ಯ

ನವದೆಹಲಿ, ಫೆ. 20 - ಭಾರತದಲ್ಲಿ ವಿಮಾನಯಾನದ ಬೇಡಿಕೆ ಹೆಚ್ಚಾಗುತ್ತಿದ್ದು, ಮುಂದಿನ ಕೆಲವು ವರ್ಷಗಳಲ್ಲಿ 20 ಸಾವಿರ ಪೈಲೆಟ್‌ಗಳ ಅಗತ್ಯ ಬರಲಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ತಿಳಿಸಿದ್ದಾರೆ.

ಉಡಾನ್ ಭವನದಲ್ಲಿ ಪೈಲೆಟ್‌ಗಳಿಗೆ ಎಲೆಕ್ಟ್ರಾನಿಕ್ ಪರ್ಸನಲ್ ಲೈಸೆನ್ಸ್ (ಇಪಿಎಲ್) ವಿತರಿಸಿ ಮಾತನಾಡಿದ ಅವರು, ವಿಮಾನಯಾನವು ಸಂಪರ್ಕ, ಆರ್ಥಿಕ ಬೆಳವಣಿಗೆ ಹಾಗೂ ತಂತ್ರಜ್ಞಾನ ಬೆಳವಣಿಗೆಗೆ ಬೆನ್ನೆಲುಬಾಗಿದೆ ಎಂದರು.

ಮುಂದಿನ ಐದು ವರ್ಷಗಳಲ್ಲಿ ಭಾರತಕ್ಕೆ ಇನ್ನೂ 50 ವಿಮಾನ ನಿಲ್ದಾಣಗಳ ಅಗತ್ಯವಿದೆ. ಕಳೆದ ಹತ್ತು ವರ್ಷಗಳಲ್ಲಿ ವಿಮಾನ ನಿಲ್ದಾಣಗಳ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿ 157 ಕ್ಕೆ ತಲುಪಲಿದೆ ಎಂದವರು ತಿಳಿಸಿದರು.

ಭಾರತದ ವಿಮಾನಯಾನ ಸಂಸ್ಥೆಗಳು 1700 ವಿಮಾನಗಳ ಖರೀದಿಗೆ ಮುಂದಾಗಿವೆ. ಇಷ್ಟೊಂದು ಬೆಳವಣಿಗೆ ಆಗುತ್ತಿರುವ ಹಿನ್ನೆಲೆಯಲ್ಲಿ ನಿಕಟ ಭವಿಷ್ಯದಲ್ಲಿ 20 ಸಾವಿರ ಪೈಲಟ್‌ಗಳ ಅಗತ್ಯ ಎದುರಾಗಲಿದೆ ಎಂದು ನಾಯ್ಡು ಹೇಳಿದರು.

# ನೀಲಾನಹಳ್ಳಿಯಲ್ಲಿ ಆಂಜನೇಯ ಸ್ವಾಮಿ ರಥೋತ್ಸವ

ದಾವಣಗೆರೆ, ಫೆ.20- ಇಲ್ಲಿಗೆ ಸಮೀಪದ ಶ್ರೀ ಕ್ಷೇತ್ರ ನೀಲಾನಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಮತ್ತು ಕಾರಣಿಕೋತ್ಸವವು ಬರುವ ಮಾರ್ಚ್ 5ರ ಬುಧವಾರ ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ. ಮಾರ್ಚ್ 3 ರ ಸೋಮವಾರ ರಾತ್ರಿ 9.10ಕ್ಕೆ ಕಂಕಣಧಾರಣೆ, ದಿನಾಂಕ 4ರ ಮಂಗಳವಾರ ಸಂಜೆ ಪೂಜಾ ಕಾರ್ಯಕ್ರಮಗಳು, ದಿನಾಂಕ 5ರ ಬುಧವಾರ ಬೆಳಿಗ್ಗೆ 10.10ಕ್ಕೆ ನೂತನ ತೇರಿನ ರಥೋತ್ಸವ, ಸಂಜೆ 6.30ಕ್ಕೆ ಕಾರಣಿಕ ಜರುಗಲಿದೆ.

# ನಗರದಲ್ಲಿ ಓಶೋ ಧ್ಯಾನ ಶಿಬಿರ

ದಾವಣಗೆರೆ, ಫೆ.20- ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಓಶೋ ಧ್ಯಾನ ಶಿಬಿರವು ಇದೇ ದಿನಾಂಕ 24 ರಿಂದ ಮಾರ್ಚ್ 2ರವರೆಗೆ ನಗರದ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿದೆ. ಆಸಕ್ತರು ಭಾಗವಹಿಸುವಂತೆ ಅರ್ಚನ (97385-72318) ಮತ್ತು ಪುಷ್ಪ (90367-19573) ತಿಳಿಸಿದ್ದಾರೆ.

# ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ.

**ಪಿ. & ಎಸ್.ಸಿ. ನಂ. 34/2024**

**ಅರ್ಜಿದಾರರು** : 1. ಶ್ರೀಮತಿ ಅನ್ನಪೂರ್ಣಮ್ಮ ಕೋಂ ಲೇಟ್ ಶಿವಮೂರ್ತಿ ಎಸ್. ಯಾನೆ ಸಾವಕ್ಕರ ಶಿವಮೂರ್ತಪ್ಪ ವಯಸ್ಸು ಸುಮಾರು 55 ವರ್ಷ, 2). ಶ್ರೀಮತಿ ಮಂಜುಳ ಎಸ್. ಬಿನ್ ಲೇಟ್ ಶಿವಮೂರ್ತಿ ಎಸ್. ಯಾನೆ ಸಾವಕ್ಕರ ಶಿವಮೂರ್ತಪ್ಪ ವಯಸ್ಸು ಸುಮಾರು 42 ವರ್ಷ, 3). ಶ್ರೀ ಬಸವರಾಜ್ ಎಸ್. ಬಿನ್ ಲೇಟ್ ಶಿವಮೂರ್ತಿ ಎಸ್. ಯಾನೆ ಸಾವಕ್ಕರ ಶಿವಮೂರ್ತಪ್ಪ ವಯಸ್ಸು ಸುಮಾರು 38 ವರ್ಷ, 4). ಶ್ರೀ ಯಶವಂತ್ ಬಿ. ಸಾವಳ್ಳಿ ಬಿನ್ ಬಸವರಾಜ್ ಮೈನರ್ ಗಾರ್ಡಿಯನ್ನಾಗಿ ಅವರ ಖಾಸಾ ತಂದೆ 3ನೇ ಅರ್ಜಿದಾರರು ಮತ್ತು ತಾಯಿ ಶ್ರೀಮತಿ ಅನಿತ ಕೋಂ ಬಸವರಾಜ್ ಎಸ್. ಎಲ್ಲರ ವಾಸ: ಐಗೂರು ಗ್ರಾಮ, ದಾವಣಗೆರೆ ತಾಲ್ಲೂಕು & ಜಿಲ್ಲೆ,

*ವಿರುದ್ಧ*

**ಎದುರುದಾರರು** : ಯಾರೂ ಇಲ್ಲ

**ಸಾರ್ವಜನಿಕ ಪತ್ರಿಕಾ ಪ್ರಕಟಣೆ**

ಅರ್ಜಿದಾರರಾದ 1. ಶ್ರೀಮತಿ ಅನ್ನಪೂರ್ಣಮ್ಮ ಕೋಂ ಲೇಟ್ ಶಿವಮೂರ್ತಿ ಎಸ್. ಯಾನೆ ಸಾವಕ್ಕರ ಶಿವಮೂರ್ತಪ್ಪ 2. ಶ್ರೀಮತಿ ಮಂಜುಳ ಎಸ್. ಬಿನ್ ಲೇಟ್ ಶಿವಮೂರ್ತಿ ಎಸ್. ಯಾನೆ ಸಾವಕ್ಕರ ಶಿವಮೂರ್ತಪ್ಪ 3. ಶ್ರೀ ಬಸವರಾಜ್ ಎಸ್.ಬಿನ್ ಲೇಟ್ ಶಿವಮೂರ್ತಿ ಎಸ್. ಯಾನೆ ಸಾವಕ್ಕರ ಶಿವಮೂರ್ತಪ್ಪ 4. ಶ್ರೀ ಯಶವಂತ್ ಬಿ. ಸಾವಳ್ಳಿ ಬಿನ್ ಬಸವರಾಜ್ ಎಲ್ಲರ ವಾಸ: ಐಗೂರು ಗ್ರಾಮ, ದಾವಣಗೆರೆ ತಾಲ್ಲೂಕು, ಆದ ಇವರುಗಳು ಮಾನ್ಯ ಘನ ನ್ಯಾಯಾಲಯದಲ್ಲಿ ಭಾರತೀಯ ಉತ್ತರಾಧಿಕಾರ ಶಾಸನದ ಅಧಿನಿಯಮ ಕಲಂ 276 ರಡಿಯಲ್ಲಿ ಅರ್ಜಿಯ ಷೆಡ್ಯೂಲ್ ಸ್ವತ್ತಿನ ಸಂಬಂಧ ಪ್ರೊಬೇಟ್ ಸರ್ಟಿಫಿಕೇಟನ್ನು ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. 1ನೇ ಅರ್ಜಿದಾರರ ಗಂಡ ಮತ್ತು 2 ಮತ್ತು 3ನೇ ಅರ್ಜಿದಾರರ ತಂದೆ ಹಾಗೂ 4ನೇ ಅರ್ಜಿದಾರರ ಅಜ್ಜನಾದ ಶ್ರೀ ಶಿವಮೂರ್ತಿ ಯಾನೆ ದಾಖಲೆಗಳಲ್ಲಿ ಖಾತಾ ವರ್ಗಾವಣೆಯನ್ನು ಅರ್ಜಿದಾರರ ಹೆಸರಿಗೆ ಮಾಡಿಸಿಕೊಳ್ಳಲು ಪ್ರೊಬೇಟ್ ಸರ್ಟಿಫಿಕೇಟ್ ಕೋರಿರುವ ಅರ್ಜಿಯ ವಿಚಾರಣೆಯನ್ನು ಮಾನ್ಯ ಘನ ನ್ಯಾಯಾಲಯವು ದಿನಾಂಕ 18.3.2025 ರಂದು ಬೆಳಗ್ಗೆ 11 ಗಂಟೆಗೆ ಮುದ್ದತ್ತು ನಿಗದಿ ಮಾಡಿರುತ್ತದೆ. ಈ ಬಗ್ಗೆ ಸಾರ್ವಜನಿಕರು ಅಥವಾ ಇನ್ನಾವುದೇ ವ್ಯಕ್ತಿಯಿಂದಾಗಲೀ ತಂಟೆ, ತಕರಾರು ಇದ್ದಲ್ಲಿ ಖುದ್ದಾಗಿ ಅಥವಾ ಅವರ ಪ್ರತಿನಿಧಿಸುವ ವಕೀಲರಿಂದಾಗಲೀ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಸಂಬಂಧ ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಿ ಪ್ರಕರಣವನ್ನು ಕಾನೂನು ರೀತಿಯ ಮುಂದಿನ ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಯಿರಿ.

**ಷೆಡ್ಯೂಲ್** : 1. ದಾವಣಗೆರೆ ತಾಲ್ಲೂಕು, ಐಗೂರು ಗ್ರಾಮದಲ್ಲಿರುವ ರಿ.ಸ.ನ:15/2, ರ ವಿಸ್ತೀರ್ಣ 05 ಎಕರೆ 22 ಗುಂಟೆ ಪೈಕಿ 03 ಎಕರೆ. ಜಮೀನಿಗೆ ಚಕ್ಕುಬಂದಿ: **ಪೂರ್ವಕ್ಕೆ** : ಎಂ. ಗಂಗಪ್ಪನವರ ಜಮೀನು, **ಪಶ್ಚಿಮಕ್ಕೆ** : ಕರಿಯಪ್ಪನವರ ಜಮೀನು, **ಉತ್ತರಕ್ಕೆ** : ಯಶವಂತ್ ಬಿ ಸಾವಳ್ಳಿ ಜಮೀನು, ದಕ್ಷಿಣಕ್ಕೆ : ರಸ್ತೆ.

2. ದಾವಣಗೆರೆ ತಾಲ್ಲೂಕು, ಐಗೂರು ಗ್ರಾಮದಲ್ಲಿರುವ ರಿ.ಸ.ನ:14/ಪಿ4 ಈಗ 14/2 ರ ವಿಸ್ತೀರ್ಣ 03 ಎಕರೆ 02 ಗುಂಟೆ. ಜಮೀನಿಗೆ **ಚಕ್ಕುಬಂದಿ: ಪೂರ್ವಕ್ಕೆ** : ಭಾಗ್ಯಮ್ಮನವರ ಜಮೀನು, **ಪಶ್ಚಿಮಕ್ಕೆ** : ಈರಪ್ಪ ತಿಮ್ಮನವರ ಜಮೀನು, **ಉತ್ತರಕ್ಕೆ** : ರಸ್ತೆ, ದಕ್ಷಿಣಕ್ಕೆ : ಸರ್ವೆ ನಂ.15/2 ರ ಜಮೀನು.

3. ದಾವಣಗೆರೆ ತಾಲ್ಲೂಕು, ಐಗೂರು ಗ್ರಾಮದಲ್ಲಿರುವ ರಿ.ಸ.ನ:15/2, ರ ವಿಸ್ತೀರ್ಣ 05 ಎಕರೆ 22 ಗುಂಟೆ ಪೈಕಿ 02 ಎಕರೆ 22 ಗುಂಟೆ. ಜಮೀನಿಗೆ **ಚಕ್ಕುಬಂದಿ: ಪೂರ್ವಕ್ಕೆ** : ಎಂ. ಗಂಗಪ್ಪನವರ ಜಮೀನು, **ಪಶ್ಚಿಮಕ್ಕೆ** : ಕರಿಯಪ್ಪನವರ ಜಮೀನು, **ಉತ್ತರಕ್ಕೆ** : ಕರಿಯಪ್ಪನವರ ಜಮೀನು, **ದಕ್ಷಿಣಕ್ಕೆ** : 2ನೇ ಅರ್ಜಿದಾರರ ಜಮೀನು.

ಅರ್ಜಿದಾರರ ಪರ ವಕೀಲರು
**ಅಶೋಕ ಕುಮಾರ**, ಮೊ. 9901661848
ಸ್ಥಳ: ದಾವಣಗೆರೆ
ದಿನಾಂಕ : 18.02.2025

ನ್ಯಾಯಾಲಯದ ಆದೇಶದೊಂದಿಗೆ
**ಮುಖ್ಯ ಆಡಳಿತಾಧಿಕಾರಿಗಳು**
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ
ನ್ಯಾಯಾಲಯದ ಮೊಹರು.

# ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ವೇದಮೂರ್ತಿಯವರು**

**ಜಿಲ್ಲಾ ಪ್ರಧಾನ ಸಹ ಕಾರ್ಯದರ್ಶಿ**
**ಸರ್ವ ಜನಾಂಗ ವಿಕಾಸ ರಕ್ಷಣಾ ಸಮಿತಿ (ರಿ).**

**(ದಿ : 21.02.2025) ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು ನೀವು ತೋರಿದ ಮಾರ್ಗದಲ್ಲೇ ಮುನ್ನಡೆಯುತ್ತಾ, ಸದಾ ನಿಮ್ಮ ನೆನಪಿನಲ್ಲಿರುವ...**

**ಧರ್ಮಪತ್ನಿ : ಶ್ರೀಮತಿ ರೂಪಾ ಮತ್ತು ಮಕ್ಕಳು**
**ಅಳಿಯಂದಿರು, ಮೊಮ್ಮಕ್ಕಳು, ಸಹೋದರರು, ಸಹೋದರಿಯರು**
**ವಂಶಸ್ಥರು ಹಾಗೂ ಬಂಧು-ಮಿತ್ರರು.**

# ನಟ ಶ್ರೇಯಸ್ ಮಂಜು ಕಾರು ಅಪಘಾತ





ದಾವಣಗೆರೆ, ಫೆ.20- ಸ್ಯಾಂಡಲ್‌ವುಡ್ ನಟ, ನಿರ್ಮಾಪಕ ಕೆ.ಮಂಜು ಅವರ ಪುತ್ರ ಶ್ರೇಯಸ್ ಕೆ. ಮಂಜು ಅವರ ಕಾರು ಅಪಘಾತಕ್ಕೀಡಾಗಿದೆ. ವಿಷ್ಣುಪ್ರಿಯ ಚಲನ ಚಿತ್ರದ ಪ್ರಚಾರಕ್ಕಾಗಿ ಬೆಂಗಳೂರಿನಿಂದ ದಾವಣಗೆರೆಗೆ ಬರುತ್ತಿದ್ದರು. ಆಗ ಕಾರು ಮತ್ತು ಲಾರಿ ಮಧ್ಯೆ ಗುರುವಾರ ಬೆಳಿಗ್ಗೆ 10ರ ವೇಳೆಗ ಅಪಘಾತ ಸಂಭವಿಸಿದೆ. ಕಾರಿನ ಮುಂದಿನ ಎಡ ಭಾಗ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಕಾರಿನಲ್ಲಿದ್ದ ಶ್ರೇಯಸ್ ಸೇರಿದಂತೆ ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ. ಸಿನಿಮಾ ಪ್ರಚಾರ ರದ್ದುಪಡಿಸಿ ವಾಪಸ್ ಬೆಂಗಳೂರಿಗೆ ತೆರಳಿದ್ದಾರೆ.

# ಹೆಜ್ಜೇನು ದಾಳಿಗೆ ರೈತನ ಸಾವು



ದಾವಣಗೆರೆ, ಫೆ.20- ಹೆಜ್ಜೇನು ದಾಳಿಯಿಂದ ರೈತನೊಬ್ಬ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹುಚ್ಚವ್ವನಹಳ್ಳಿ ಗ್ರಾಮ ದಲ್ಲಿ ಗುರುವಾರ ನಡೆದಿದೆ. ರೈತ ನಾಗಪ್ಪ (65) ಹೆಜ್ಜೇನು ದಾಳಿಗೆ ಮೃತಪಟ್ಟ ರೈತ. ಎಂದಿನಂತೆ ಬೆಳಗ್ಗೆ ಜಮೀನಿಗೆ ತೆರಳುತ್ತಿದ್ದಾಗ ಏಕಾಏಕಿ ಹೆಜ್ಜೇನು ಹುಳುಗಳು ದಾಳಿ ನಡೆಸಿವೆ. ಅಸ್ವಸ್ಥಗೊಂಡಿದ್ದ ರೈತನನ್ನು ಕೂಡಲೇ ದಾವಣಗೆರೆಯ ಬಾಪೂಜಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ರೈತ ಕೊನೆಯುಸಿರೆಳೆದಿದ್ದಾರೆ. ಈ ಕುರಿತು ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ 1.99 ಕೋಟಿ

ದಾವಣಗೆರೆ, ಫೆ.20- ಬರುವ ಆರ್ಥಿಕ ವರ್ಷಕ್ಕೆ ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ರೂ. 1,99,80000 ಗಳ ಬಜೆಟ್ ನೀಡಿ ಮಹಾಪೌರರು ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷರಾದ ಕೆ. ಚಮನ್‌ಸಾಬ್ ಅನುಮೋದನೆ ನೀಡಿದ್ದಾರೆ ಎಂದು ನಗರ ಮುಖ್ಯ ಗ್ರಂಥಾಲಯಾಧಿಕಾರಿ ಪಿ.ಆರ್.ತಿಪ್ಪೇಸ್ವಾಮಿ ತಿಳಿಸಿದ್ದಾರೆ. ನಗರ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕರ ಕಚೇರಿಯಲ್ಲಿ ಮೊನ್ನೆ ಆಯೋಜಿಸಲಾಗಿದ್ದ 2025-26 ನೇ ಸಾಲಿನ ಆಯವ್ಯಯ ಸಭೆಯಲ್ಲಿ ಬಜೆಟ್‌ಗೆ ಅನುಮೋದನೆ ನೀಡಲಾಯಿತು.

ದೇವರಾಜ ಅರಸು ಬಡಾವಣೆ ಗ್ರಂಥಾಲಯದ ವಿಸ್ತರಣೆ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಮೂಲಕ ನಿರ್ವಹಿಸಲು ಅನುಮೋದನೆ ನೀಡಿದರು. ಬಡಾವಣೆ ಪೊಲೀಸ್ ಠಾಣೆ ಎದುರಿಗಿರುವ ಸಿಲ್ವರ್ ಜ್ಯುಬಿಲಿ ಶಾಖಾ ಗ್ರಂಥಾಲಯಕ್ಕೆ ಓದುಗರ ಅನುಕೂಲಕ್ಕೆ ಬೋರ್‌ವೆಲ್ ಕೊರೆಸಲು ಅನುಮೋದನೆ ನೀಡಿದ್ದಲ್ಲದೇ ಸ್ಥಳದಲ್ಲಿಯೇ ಆಯುಕ್ತರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಪರಿಷತ್ ಕಾರ್ಯದರ್ಶಿ ಎಸ್. ಶ್ರೀನಿವಾಸ, ಧ.ರಾ.ಮ ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ರೂಪಶ್ರೀ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಎಲ್.ಗೋವಿಂದರಾಜು, ರಾಜನಹಳ್ಳಿ ಸೀತಮ್ಮ ಬಾಲಕೀಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಎ.ಆರ್. ಮಂಜಪ್ಪ ಹಾಗೂ ಗ್ರಂಥಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸ್ಥಾಯಿ ಸಮಿತಿ ರಚನೆಯಲ್ಲಿ ಆಡಳಿತಕ್ಕೆ ಹಿನ್ನಡೆ ಕೋರ್ಟ್‌ನತ್ತ ಮುಖಮಾಡುವ ವಿರೋಧಿಗಳು



**ರಾಣೇಬೆನ್ನೂರು**

ರಾಣೇಬೆನ್ನೂರು, ಫೆ.20- ನೂರು ವಿಷಯಗಳ ವಿಷಯ ಪಟ್ಟಿಯ ಸರ್ವ ಸದಸ್ಯರ ಸಾಧಾರಣ ಸಭೆ ಇಂದು ಮಧ್ಯಾಹ್ನ ನಡೆದು 87 ವಿಷಯಗಳು ಅಲ್ಪಸ್ವಲ್ಪ ಚರ್ಚೆಗಳೊಂದಿಗೆ ಸರ್ವ ಸಮ್ಮತದೊಂದಿಗೆ ನಿರ್ಣಯಿಸಲ್ಪಟ್ಟವು.

ನಗರಸಭೆ ಸ್ಥಾಯಿ ಸಮಿತಿ ರಚನೆಯ 88ನೇ ವಿಷಯ ಕುರಿತು ಮಂಡನೆ, ಅನುಮೋದನೆಗಳು ಸಹ ನಡೆದವು. ಆಗ ವಿರೋಧಿ ಬಣದ ಪ್ರಕಾಶ ಬುರುಡಿಕಟ್ಟಿ ಉಪಸೂಚನೆ ನೀಡಿದ್ದು, ಅದನ್ನು ಮತಕ್ಕೆ ಹಾಕದೇ ಅಧ್ಯಕ್ಷರು ಸಭೆ ಮುಂದೂಡಿ ಹೊರ ನಡೆದಿದ್ದು, ನಿಯಮ ಬಾಹಿರವಾಗಿದೆ ಎಂದು ಹೇಳಲಾಗಿದೆ.

ಬಿರುಕು ಬಿಟ್ಟ ಬಿಜೆಪಿಯ ಒಂದು ಬಣದ ಜೊತೆ ಸೇರಿ ರಾಣೇಬೆನ್ನೂರು ನಗರಸಭೆಯ ಆಡಳಿತ ವಹಿಸಿಕೊಂಡಿದ್ದ ಕಾಂಗ್ರೆಸ್‌ನ ಚಂಪಕ ಬಿಸಲಳ್ಳಿ ಅವರು ಅಧ್ಯಕ್ಷರಾಗಿ ಇಂದು ಬೆಳಿಗ್ಗೆ ಪ್ರಥಮ ಸಭೆ ನಡೆಸಿ, ಒಂದು ವರ್ಷದ ಬಜೆಟ್‌ಗೆ ಸರ್ವಾನುಮತದ ಒಪ್ಪಿಗೆ ಪಡೆದು ಸರ್ವರೊಂದಿಗೆ ಹೋಳಿಗೆ ಊಟ ಸವಿದಿದ್ದರು.

ಸ್ಥಾಯಿ ಸಮಿತಿ ರಚನೆಯಲ್ಲಿ ಆಡಳಿತ ಬಣಕ್ಕೆ ಬಹುಮತ ದೊರೆಯಲಾರದು ಎಂಬುದನ್ನು ಅಧ್ಯಕ್ಷರು ಮನಗಂಡು ಇಂದಿನ ಸಾಧಾರಣ ಸಭೆಯನ್ನು ಮುಂದೂಡಿದ್ದು, ಜೊತೆಗೆ ಅವರ ಸಭೆಯ ನಡಾವಳಿಕೆಗಳು ಕಾನೂನು ಬಾಹಿರವಾಗಿವೆ. ಕಾರಣ ಈ ವಿಚಾರವಾಗಿ ಅಧಿಕಾರಿಗಳಿಂದ ನಮಗೆ ನ್ಯಾಯ ಸಿಗದಿದ್ದರೆ ನ್ಯಾಯಾಲಯಕ್ಕೆ ತೆರಳುವುದಾಗಿ ಪ್ರಕಾಶ್ ಬುರುಡಿಕಟ್ಟಿ ಪತ್ರಿಕಾಗೋಷ್ಠಿ ನಡೆಸಿ ತಿಳಿಸಿದರು.

ಬುರಡಿಕಟ್ಟಿ ಜೊತೆಯಲ್ಲಿ ಮಾಜಿ ಅಧ್ಯಕ್ಷರಾದ ರೂಪಾ ಚಿನ್ನಿಕಟ್ಟಿ, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿದ್ದಪ್ಪ ಬಾಗಲರ, ಪ್ರಕಾಶ ಪೂಜಾರ, ಹನುಮಂತಪ್ಪ ಹೆದ್ದೇರಿ,ಪ್ರಭಾವತಿ ತಿಳವಳ್ಳಿ, ಗಂಗಮ್ಮ ಹಾವನೂರ, ಪಾಂಡುರಂಗ ಗಂಗಾವತಿ ಸೇರಿದಂತೆ ಬುರಡಿಕಟ್ಟಿ ಬಣದ ಸದಸ್ಯರು ಇದ್ದರು.

# ಜಗಳೂರು ತಾಲ್ಲೂಕು ಭವಿಷ್ಯದಲ್ಲಿ ಅಡಿಕೆ ನಾಡಾಗಲಿ



> **ಜಗಳೂರು ತಾಲ್ಲೂಕಿನಲ್ಲಿ ಕೆರೆಗಳು ಭರ್ತಿಯಾಗಿದ್ದು, ಬರದ ನಾಡಿನ ಹಣೆಪಟ್ಟಿ ಸಂಪೂರ್ಣ ಕಳಚಿ ಭವಿಷ್ಯದಲ್ಲಿ ಅಡಿಕೆ ನಾಡಾಗಿ ಪರಿವರ್ತನೆಗೊಂಡು ಕಂಗೊಳಿಸಲಿದೆ.**
> **-ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಉಸ್ತುವಾರಿ ಸಚಿವರು**

ಜಗಳೂರು, ಫೆ.20- ಎಸ್ಸಿ, ಎಸ್ಟಿ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು. ಯಾವುದೇ ತಾಲ್ಲೂಕಿನವರಾಗಲೀ ಅಧಿಕಾರಿಗಳು ವಸತಿ ಶಾಲೆಗಳಲ್ಲಿ ಕಡ್ಡಾಯವಾಗಿ ಪ್ರವೇಶಾತಿ ನೀಡಬೇಕು ಎಂದು ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಇಲಾಖೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನಿರ್ದೇಶಿಸಿದರು.

ತಾಲ್ಲೂಕಿನ ಕಾಮಗೇತನಹಳ್ಳಿ ಹೊಸಹಟ್ಟಿ ಬಳಿಯಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ಚಿಕ್ಕಬಂಟನಹಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಪಲ್ಲಾಗಟ್ಟೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳ ಮೂರು ನೂತನ ಕಟ್ಟಡಗಳ ಲೋಕಾರ್ಪಣೆ ಕಾರ್ಯಕ್ರಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಹುದಿನಗಳಿಂದ ನೆನೆಗುದಿಗೆ ಬಿದ್ದಿದ್ದ 22 ಕೋಟಿ ಅನುದಾನದಲ್ಲಿ ವಸತಿ ಶಾಲೆಗಳ ಸುಸಜ್ಜಿತ ಕಟ್ಟಡಗಳ ಕಾಮಗಾರಿ ಪೂರ್ಣಗೊಂಡು ಇಂದು ಲೋಕಾರ್ಪಣೆಗೊಂಡಿವೆ. ಜಿಲ್ಲೆಯಲ್ಲಿ ಶೈಕ್ಷಣಿಕ ಪ್ರಗತಿಗಾಗಿ ಸಾಕಷ್ಟು ಆದ್ಯತೆ ನೀಡಿ ವಸತಿ ಶಾಲೆಗಳನ್ನು ನಿರ್ಮಿಸಲಾಗಿದೆ. ಹಂತ-ಹಂತವಾಗಿ ಎಲ್ಲಾ ಜಾತಿ, ಜನಾಂಗಗಳ ವಸತಿ ಶಾಲೆಗಳ ಸ್ವಂತ ಕಟ್ಟಡಗಳ ನಿರ್ಮಾಣ, ಮೂಲಸೌಕರ್ಯ, ಶೈಕ್ಷಣಿಕ ಸೌಲಭ್ಯ ಒದಗಿಸಲಾಗುವುದು.

ವಿದ್ಯಾರ್ಥಿಗಳು ಸರ್ಕಾರದ ಸೌಲಭ್ಯಗಳ ಸದುಪಯೋಗ ಪಡೆದುಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಚಿವರು ಕಿವಿಮಾತು ಹೇಳಿದರು.

ಏಕಲವ್ಯ ವಸತಿ ಶಾಲೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ 70:30 ಅನುಪಾತದಲ್ಲಿ ಅನು ದಾನ ಬರಲಿದೆ. ಗುರುಸಿದ್ದಾಪುರ ಗ್ರಾಮದ ಬಳಿ 18 ಎಕರೆ ಸರ್ಕಾರಿ ಜಮೀನು ನಿಗದಿಯಾಗಿದ್ದು, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರ ಸಹಕಾರದೊಂದಿಗೆ ಅನುದಾನ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಜಗಳೂರು ತಾಲ್ಲೂಕಿನಲ್ಲಿ ಕೆರೆಗಳು ಭರ್ತಿಯಾಗಿದ್ದು, ಬರದ ನಾಡಿನ ಹಣೆಪಟ್ಟಿ ಸಂಪೂರ್ಣ ಕಳಚಿ ಭವಿಷ್ಯದಲ್ಲಿ ಅಡಿಕೆ ನಾಡಾಗಿ ಪರಿವರ್ತನೆಗೊಂಡು ಕಂಗೊಳಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಬಿ.ದೇವೇಂದ್ರಪ್ಪ, ಬರುವ ಜೂನ್ 1 ರಂದು ಲೋಕಾರ್ಪಣೆಗೊಳ್ಳಬೇಕಿದ್ದ ನೂತನ ಕಟ್ಟಡಗಳು ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಿಂದ ವಿಳಂಬವಾಗಿದ್ದವು. ತಾತ್ಕಾಲಿಕ ವಾಗಿ ಮಕ್ಕಳ ಶಿಕ್ಷಣಕ್ಕೆ ಅನುಕೂಲ ವಾಗಲು ತರಗತಿ ಗಳನ್ನು ಆರಂಭಿಸಲಾಗಿತ್ತು. ಇಂದು ಅಧಿಕೃತವಾಗಿ ಲೋಕಾರ್ಪಣೆಗೊಂಡಿವೆ. ಬಾಡಿಗೆ ಕಟ್ಟಡಗಳಿಂದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಂಡಿವೆ. ಪಟ್ಟಣದಲ್ಲಿ ಅಲ್ಪ ಸಂಖ್ಯಾತರ ಇಲಾಖೆ ವಸತಿ ಶಾಲೆ ಸ್ವಂತ ಕಟ್ಟಡವಿಲ್ಲದೇ ಬಾಡಿಗೆ ಕಟ್ಟಡದಲ್ಲಿದ್ದು, ಬಗ್ಗೇನಹಳ್ಳಿ ಬಳಿ ಸರ್ಕಾರಿ ಜಾಗದಲ್ಲಿ 16 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದರು.

ಜಗಳೂರು ಕ್ಷೇತ್ರದ ಸಮಗ್ರ ಅಭಿವೃದ್ದಿಗಾಗಿ ಸಾರ್ವಜನಿಕ ಆಸ್ಪತ್ರೆ ನಿರ್ಮಾಣಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡುರಾವ್ ಅವರು, ಬಜೆಟ್‌ನಲ್ಲಿ ಅನುದಾನ ಘೋಷಿಸುವ ಭರವಸೆ ನೀಡಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್ ಡಿಪೋ ನಿರ್ಮಾಣಕ್ಕೆ ತಮ್ಮ ಆಡಳಿತಾವಧಿಯಲ್ಲಿ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಮನವಿ ಮಾಡಿದರು.

ಸಮಾರಂಭದಲ್ಲಿ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್, ಬಿಸಿಎಂ ಇಲಾಖೆ ಜಿಲ್ಲಾ ಕಲ್ಯಾಣ ಅಧಿಕಾರಿ ಗಾಯತ್ರಿ, ಪ.ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕ ನವೀನ್ ಕುಮಾರ್ ಮಠದ್, ತಾ.ಪಂ ಇಓ ಕೆಂಚಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಜಿ.ಪಂ ಮಾಜಿ ಸದಸ್ಯ ಕೆ.ಪಿ. ಪಾಲಯ್ಯ, ಕೆಪಿಸಿಸಿ ಎಸ್ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ. ಕೀರ್ತಿಕುಮಾರ್, ದೊಣೆಹಳ್ಳಿ ಗ್ರಾ.ಪಂ ಅಧ್ಯಕ್ಷ ತಿಪ್ಪೇಸ್ವಾಮಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಂಜುನಾಥ್, ಗ್ರಾ.ಪಂ ಸದಸ್ಯ ಸಿದ್ದಲಿಂಗಪ್ಪ, ಪ್ರಾಂಶುಪಾಲರಾದ ಅಮರೇಶ್, ಮಹಾಂತೇಶ್ ಕಲ್ಲೂರು, ಮುಖಂಡರಾದ ಬಿ. ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಸಾವಿತ್ರಮ್ಮ ಇದ್ದರು.

# ರಾಜ್ಯ ಸರ್ಕಾರದಿಂದ ಗುತ್ತಿಗೆದಾರರ 64 ಸಾವಿರ ಕೋಟಿ ರೂ. ಬಿಲ್ ಬಾಕಿ : ಅಶೋಕ್ ಟೀಕೆ

ಬೆಂಗಳೂರು, ಫೆ. 20 - ಬೊಕ್ಕಸ ಬರಿದಾಗಿಲ್ಲ, ರಾಜ್ಯದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ ಎಂಬುದಾಗಿ ಸುಳ್ಳು ಹೇಳುತ್ತಲೇ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ, ಗುತ್ತಿಗೆದಾರರ 64 ಸಾವಿರ ಕೋಟಿ ರೂ. ಬಿಲ್ ಬಾಕಿ ಉಳಿಸಿಕೊಂಡಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಇಂದಿಲ್ಲಿ ಟೀಕಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ಬಳಿ ರಸ್ತೆಗಳ ಗುಂಡಿಗೆ ಒಂದು ಬುಟ್ಟಿ ಮಣ್ಣು ಹಾಕಲೂ ದುಡ್ಡಿಲ್ಲ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತು ಅಕ್ಷರಶಃ ನಿಜ ಎಂದಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಅಭಿವೃದ್ಧಿ ಕಾರ್ಯಗಳೇ ಆಗಿಲ್ಲ, ಕಳೆದ 20 ತಿಂಗಳಲ್ಲಿ ಒಂದೇ ಒಂದು ಹೊಸ ಕಾಮಗಾರಿಗೂ ಗುದ್ದಲಿ ಪೂಜೆ ನಡೆದಿಲ್ಲ. ಗುತ್ತಿಗೆದಾರರ ಬಿಲ್ ಬಾಕಿ ಪಾವತಿ ಮಾಡದಿದ್ದರೆ ಜಾರಿಯಲ್ಲಿರುವ ಕಾಮಗಾರಿಗಳೂ ನಿಲ್ಲುತ್ತವೆ. ಅಲ್ಲದೆ, ಸರ್ಕಾರದ ಮೇಲೆ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗುತ್ತವೆ ಎಂದು ಹೇಳಿದರು.

ಸಿದ್ದರಾಮಯ್ಯ ಅಧಿಕಾರದ ದುರಾಸೆಗೆ ಕರ್ನಾಟಕದ ಆರ್ಥಿಕ ಪರಿಸ್ಥಿತಿಯನ್ನು ದುಸ್ಥಿತಿಗೆ ತಂದಿಟ್ಟಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಳುಗೆಡವಿ 16 ಬಜೆಟ್ ಮಂಡಿಸುವ ದಾಖಲೆ ಬರೆದರೇನು, ಎರಡೆರಡು ಬಾರಿ ಮುಖ್ಯಮಂತ್ರಿ ಆದರೇನು. ಕರ್ನಾಟಕ ಕಂಡ ಅತ್ಯಂತ ಅಸಮರ್ಥ ಮುಖ್ಯಮಂತ್ರಿ ಎಂದೇ ನಿಮ್ಮನ್ನು ಇತಿಹಾಸ ನೆನಪಿಡಲಿದೆ ಎಂದು ವ್ಯಂಗ್ಯವಾಡಿದ್ದಾರೆ.

# ರಾಜ್ಯ ದೇವಾಂಗ ಸಂಘದ ನಿರ್ದೇಶಕರಾಗಿ ಸಂಕಪ್ಪ ಮಾರನಾಳ



**ರಾಣೇಬೆನ್ನೂರು**

ರಾಣೇಬೆನ್ನೂರು, ಫೆ. 20- ರಾಜ್ಯ ದೇವಾಂಗ ಸಂಘದ ನೂತನ ನಿರ್ದೇಶಕರಾಗಿ ರಾಣೇಬೆನ್ನೂರಿನ ಗೌರಿಶಂಕರ ನಗರದ ನಿವಾಸಿ ಸಂಕಪ್ಪ ಮಾರನಾಳ ಅವರನ್ನು ಆಯ್ಕೆ ಮಾಡಲಾಗಿದೆ. ಹಾವೇರಿ ಬನಶಂಕರಿ ದೇವಿ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ರಾಜ್ಯ ದೇವಾಂಗ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ರಾಜೇಶ್ ಆದೇಶ ಪತ್ರ ವಿತರಿಸಿದರು. ಸಹ ಕಾರ್ಯದರ್ಶಿ ಲಕ್ಷ್ಮೀಕಾಂತ ಹುಲಗೂರ, ಉಪಾಧ್ಯಕ್ಷ ವಿರೂಪಾಕ್ಷಪ್ಪ ಗೂಳಿ, ಅಶೋಕ ಹೊನ್ನಳ್ಳಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಬಸವರಾಜ ಮೈಲಾರ, ಸಂಘದ ಸದಸ್ಯರಾದ ಗಣೇಶ ಹಾವನೂರ, ವಸಂತ ಕುಂಚೂರ ಸೇರಿದಂತೆ ಇತರರಿದ್ದರು.

# ಚೌಕಿಪೇಟೆ ಅಕ್ಕಿ ವರ್ತಕರಿಂದ ಪಾದಯಾತ್ರಿಗಳಿಗೆ ಹಣ್ಣು ವಿತರಣೆ



ದಾವಣಗೆರೆ, ಫೆ. 20- ಇಲ್ಲಿನ ಚೌಕಿಪೇಟೆ ಅಕ್ಕಿ ವರ್ತಕರಿಂದ ಶ್ರೀ ಗುರು ಕೊಟ್ಟೂರೇಶ್ವರ ಪಾದಯಾತ್ರೆ ಹೋಗುವ ಭಕ್ತಾದಿಗಳಿಗೆ ಅರಸೀಕೆರೆಯಲ್ಲಿ ಹಣ್ಣು, ನೀರು, ಮಜ್ಜಿಗೆ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಯಪ್ರಕಾಶ್ ಮಾಗಿ, ಚೌಕಿಪೇಟೆ ಅಕ್ಕಿ ವರ್ತಕರು, ಗುಜರಿ ಲೈನ್ ಅಕ್ಕಿ ನುಚ್ಚು ವರ್ತಕರು, ರೈಸ್ ಬ್ರೋಕರ್‌ಗಳು ಮತ್ತು ಸ್ನೇಹ ಬಳಗದವರು ಉಪಸ್ಥಿತರಿದ್ದರು.

# ಐಕಾಂತಿಕ ಸಹಜ ಕೃಷಿ ವನದಲ್ಲಿ ಗಮನ ಸೆಳೆದ 'ಅಚ್ಚರಿ ಗಡಿಗೆ' ವಿಶೇಷ ಕಾರ್ಯಕ್ರಮ





ಮಲೇಬೆನ್ನೂರು, ಫೆ.20- ಮಲ್ಲನಾಯ್ಕನಹಳ್ಳಿ ಬಳಿ ಇರುವ ಶ್ರೀನಿವಾಸ ನಗರ ಕ್ಯಾಂಪಿನ 'ಐಕಾಂತಿಕ' ಸಹಜ ಕೃಷಿ ವನದಲ್ಲಿ ದಾವಣಗೆರೆಯ ಸಹಜ ಕೃಷಿ ಬಳಗದ ವತಿಯಿಂದ ಭಾನುವಾರ 'ಅಚ್ಚರಿ ಗಡಿಗೆ' ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಗುಜರಾತ್‌ನ ಸೂರತ್‌ನಿಂದ ಆಗಮಿಸಿದ್ದ ಅನುಭವಿ ತಜ್ಞ ದಂಪತಿ ಶ್ರೀಮತಿ ಸೇಜಲ್ ಮತ್ತು ನಿಕಿಲ್ ಪಟೇಲ್ ಅವರು 'ಸ್ವಾಶಿಕ್ಷಣ' ಪದ್ಧತಿಯ ಕುರಿತು ಪೋಷಕರೊಂದಿಗೆ ಸಂವಾದ ನಡೆಸಿದರು. ಅಲ್ಲದೇ ಅವರು ತಮ್ಮ ಮಕ್ಕಳ ಸ್ವಾಶಿಕ್ಷಣ ಪದ್ಧತಿಯ ಅನುಭವಗಳನ್ನು ಹಂಚಿಕೊಂಡರು.

ನಾವು ನಮ್ಮ ಮಕ್ಕಳನ್ನು ಮೊದಲು ಅರ್ಥಮಾಡಿಕೊಳ್ಳಬೇಕು, ನಂತರ ಅವರ ಜಿಜ್ಞಾಸೆಗಳಿಗೆ ಬೆಂಬಲ ನೀಡಬೇಕು, ಸ್ವಾಶಿಕ್ಷಣದಲ್ಲಿ ನಾವು ಮಕ್ಕಳಿಗೆ ಸಮಯ ಹಾಗೂ ಸ್ವಾತಂತ್ರ್ಯವನ್ನು ನೀಡುವುದರಿಂದ ಅವರು ಅದ್ಭುತಗಳನ್ನು ಸೃಷ್ಟಿಸಲು ಸಹಾಯವಾಗುತ್ತದೆ. ಈಗಿನ ಶಿಕ್ಷಣ ವ್ಯವಸ್ಥೆ ಮಕ್ಕಳಿಗೆ ಸಮಯ ಹಾಗೂ ಸ್ವಾತಂತ್ರ್ಯವನ್ನು ನೀಡುವುದಿಲ್ಲ. ಆದ್ದರಿಂದ ಮಕ್ಕಳು ಅವರ ಆಸಕ್ತಿ, ಜಿಜ್ಞಾಸೆ ಮತ್ತು ಬಹು ಅಮೂಲ್ಯವಾದ ಸಮಯವನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಶ್ರೀಮತಿ ಸೇಜಲ್ ಮತ್ತು ನಿಕಿಲ್ ಪಟೇಲ್ ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬಳಗದ ಸದಸ್ಯರು, ಮಧ್ಯಾಹ್ನದ ಊಟಕ್ಕೆ ತಮ್ಮ ಮನೆಗಳಿಂದ ವಿಷಮುಕ್ತ ಆಹಾರವನ್ನು ತಯಾರಿಸಿ ತಂದಿದ್ದರು. ಅದನ್ನು ಎಲ್ಲರ ಜೊತೆ ಹಂಚಿಕೊಂಡು 'ಅಚ್ಚರಿ ಗಡಿಗೆ'ಯ ಬೊಂಬಾಟ್ ಊಟ ಆಸ್ವಾದಿಸಿದರು. ಈ ಮೂಲಕ ಎಲ್ಲರ ತಟ್ಟೆಯಲ್ಲಿ ವಿವಿಧ ರುಚಿಕರ ಹಾಗೂ ಆರೋಗ್ಯಕರ ಭೋಜನ ಗಮನ ಸೆಳೆಯಿತು.

ಅಪರಾಹ್ನದ ಸಮಯದಲ್ಲಿ 'ಚೌಕ ಬಾರ' ತರಕಾರಿ ಬೆಳೆಯುವ ಪದ್ಧತಿಯನ್ನು ಪ್ರಾತ್ಯಕ್ಷಿಕೆ ಮೂಲಕ ಅನಾವರಣಗೊಳಿಸಲಾಯಿತು. ಈ ಸಂದರ್ಭದಲ್ಲಿ ಏರು ಮಡಿ ಮಾಡಲು ಅಲ್ಲಿ ನೆರೆದಿದ್ದ ಮಕ್ಕಳು, ಹಿರಿಯರು ಇದ್ದ ಕುಟುಂಬದ ಸದಸ್ಯರೆಲ್ಲರೂ ಉತ್ಸಾಹದಿಂದ ಮಣ್ಣಿನಲ್ಲಿ ಕೆಲಸ ಮಾಡುವ ಅದ್ಭುತ ಅನುಭವವನ್ನು ಪಡೆದರು. ಈ ವೇಳೆ ಐವತ್ತಕ್ಕೂ ಹೆಚ್ಚಿನ ತರಹದ ಪಾರಂಪರಿಕ ತಳಿಗಳ ತರಕಾರಿ, ಹಣ್ಣು - ಹಂಪಲ, ಔಷಧಿ ಸುಗಂಧ ದ್ರವ್ಯದ ಗಿಡಮೂಲಿಕೆ, ಎಣ್ಣೆಕಾಳು, ಗೆಡ್ಡೆಗೆಣಸು ಮತ್ತು ಅಲಂಕಾರಿಕ ಸಸ್ಯಗಳ ಬೀಜಗಳನ್ನು ಬಿತ್ತಿದರು. ಈ ಪದ್ದತಿಯಿಂದ ಯಾವುದೇ ರೀತಿಯ ಗೊಬ್ಬರ ಮತ್ತು ಕೀಟನಾಶಕ ಬಳಸುವ, ಉಳಿಮೆ ಮಾಡುವ ಅಗತ್ಯವಿಲ್ಲ ಹಾಗೂ ಈ ವಿಧಾನ ನಿರಂತರ ಬೆಳೆ, ಕಡಿಮೆ ಶ್ರಮ, ರೋಗ ಮತ್ತು ಕೀಟಬಾಧೆ ನಿರೋಧಕವಾಗಿ ಬೆಳೆಯಲು ಸೂಕ್ತವಾಗಿದೆ. ಈ ಕಾರ್ಯಕ್ರಮವು ನೈಸರ್ಗಿಕ ಕೃಷಿಯ ಬಗ್ಗೆ ಸಾಕಷ್ಟು ಜ್ಞಾನ ಮತ್ತು ಅನುಭವವನ್ನು ನೀಡಿತು ಎಂದು ಪಾಲ್ಗೊಂಡುವರು ಖುಷಿ ಪಟ್ಟರು.

ಸಂಪೂರ್ಣ ಕಾರ್ಯಕ್ರಮಗಳು ನೈಸರ್ಗಿಕ ಕೃಷಿಕ ರಾಘವ ಮತ್ತು ಐಕಾಂತಿಕ ಸಮುದಾಯದ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆದವು.

# ಆದರ್ಶ ವಿದ್ಯಾಲಯ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹರಪನಹಳ್ಳಿ, ಫೆ.20- ತಾಲ್ಲೂಕಿನ ಅನಂತನಹಳ್ಳಿ ಸಮೀಪದ ಸರ್ಕಾರಿ ಆದರ್ಶ ವಿದ್ಯಾಲಯದ 2025-26ನೇ ಸಾಲಿನ 6ನೇ ತರಗತಿ ದಾಖಲಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ತಾಲ್ಲೂಕಿನ ನಿವಾಸಿಗಳು www.schooleducation.kar.nic.in ಅಥವಾ www.vidyavahini.karnataka.gov.in ಇಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ಇದೇ ದಿನಾಂಕ 28 ಕೊನೆಯ ದಿನವಾಗಿದೆ. ಮಾರ್ಚ್ 23ರಂದು ಪರೀಕ್ಷೆ ನಡೆಯಲಿವೆ. ವಿವರಕ್ಕೆ ಸಂಪರ್ಕಿಸಿ : 9880955078, 7975534725, 9845977050.

# ಕರಾವಳಿ ಗಾರ್ಡ್ ರೇಡಿಯೋಗಳಿಗೆ 1,220 ಕೋಟಿ ರೂ. ಒಪ್ಪಂದ

ನವದೆಹಲಿ, ಫೆ. 20 - ಕರಾವಳಿ ಗಾರ್ಡ್‌ಗಳಿಗೆ ಅತ್ಯಾಧುನಿಕ 149 ರೇಡಿಯೋಗಳ ಪೂರೈಕೆಗಾಗಿ ಕೇಂದ್ರ ಸರ್ಕಾರವು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಜೊತೆ 1,220 ಕೋಟಿ ರೂ.ಗಳ ಒಪ್ಪಂದ ಮಾಡಿಕೊಂಡಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ನಂಬಿಕಾರ್ಹ, ಸುರಕ್ಷಿತ ಹಾಗೂ ಉನ್ನತ ವೇಗದ ಮಾಹಿತಿ ರವಾನೆಗಾಗಿ ಈ ರೇಡಿಯೋಗಳು ನೆರವಾಗಲಿವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಇದಕ್ಕಾಗಿ ಬೆಂಗಳೂರಿನ ಬಿಇಎಲ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ರೇಡಿಯೋಗಳಿಗಾಗಿ ದೇಶಿಯವಾದ ವಿನ್ಯಾಸ ಹಾಗೂ ಉತ್ಪಾದನೆ ಅಭಿವೃದ್ಧಿಪಡಿಸಲಾಗುವುದು ಎಂದು ಸಚಿವಾಲಯ ಹೇಳಿದೆ.

# ವಿವೇಕರ ತತ್ವಾದರ್ಶಗಳು ಯುವ ಜನತೆಗೆ ಸ್ಫೂರ್ತಿ



ದಾವಣಗೆರೆ, ಜ.20- ಶ್ರೇಷ್ಠ ದಾರ್ಶನಿಕ ಹಾಗೂ ಯುಗಪುರುಷರಾದ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳು ಯುವ ಜನತೆಗೆ ಸ್ಫೂರ್ತಿ ನೀಡಲಿವೆ ಎಂದು ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಯುವ ಸ್ಪಂದನದ ಸಂಯುಕ್ತಾಶ್ರಯದಲ್ಲಿ ಕ್ರೀಡಾ ವಸತಿ ನಿಲಯದಲ್ಲಿ ಈಚೆಗೆ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಪಂಚವೇ ಒಂದು ಗರಡಿ ಮನೆ. ನಾವಿಲ್ಲಿ ಜ್ಞಾನದ ಮೂಲಕ ಬಲಿಷ್ಠರಾಗಬೇಕಿದೆ. ಈ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದರು ತಿಳಿಸಿದಂತೆ ಯುವ ಸಮೂಹ ಶಕ್ತಿಶಾಲಿ ಹಾಗೂ ಶ್ರದ್ಧಾವಂತರಾಗಬೇಕು ಎಂದರು.

ಆಗ ಆಳಾಗಿ ದುಡಿಯುವುದನ್ನು ಕಲಿಯಬೇಕು. ಆಗ ನಾಯಕನಾಗುವ ಅರ್ಹತೆಗಳು ಬರುತ್ತವೆ. ಮಾನವನ ಶಕ್ತಿಯಿಂದಲೇ ಪ್ರಪಂಚ ನಿಂತಿದ್ದು, ಆ ಶಕ್ತಿಯನ್ನು ದೇಶ ಕಟ್ಟಲು ಬಳಸಬೇಕು ಎಂದು ತಿಳಿಸಿದರು.

ಇಂದಿನ ಯುವ ಪೀಳಿಗೆ ದುಶ್ಚಟಗಳ ದಾಸರಾಗಿ ತಮ್ಮ ಬದುಕಿನ ಜತೆಗೆ ಇಡೀ ಕುಟುಂಬದ ಬದುಕನ್ನೂ ಹಾಳು ಮಾಡಿಕೊಳ್ಳುತ್ತಿ ದ್ದಾರೆ. ಚಿಕ್ಕ-ಚಿಕ್ಕ ವಿಷಯಗಳಿಗೆ ಆತ್ಮಹತ್ಯೆ ಕಡೆ ಮುಖ ಮಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದರ ತತ್ವಗಳನ್ನು ಯುವಕರಿಗೆ ಮನವರಿಕೆ ಮಾಡಿಸಿದರೆ. ತಪ್ಪು ದಾರಿಗೆ ಹೋಗುವ ಯುವಕರನ್ನು ತಡೆಯಬಹುದು. ಪ್ರತಿಯೊಬ್ಬ ಯುವಕ ದೇಶ ಕಟ್ಟುವ ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ಹೇಳಿದರು. ಈ ವೇಳೆ ಕ್ರೀಡಾ ವಸತಿ ನಿಲಯದ ಅಧೀಕ್ಷಕ ಕಾಶಿನಾಥ್, ಸಮಾಜ ಸೇವಕ ಶ್ರೀನಾಥ್, ನಿವೃತ್ತ ಮುಖ್ಯ ಶಿಕ್ಷಕ ಹೆಚ್.ಎಂ. ಪ್ರಕಾಶ್ ಇದ್ದರು. ವಿದ್ಯಾರ್ಥಿ ಬಸವರಾಜ್ ಪ್ರಾರ್ಥಿಸಿದರು. ಹೆಚ್.ಎಂ. ಯೋಗೇಶ್ ಸ್ವಾಗತಿಸಿದರು. ಎಸ್.ಬಿ. ಶಿಲ್ಪ ನಿರೂಪಿಸಿದರು.

**AVAILABLE FOR RENT**
1st Floor Building (2715 Sqft.)
N.R. Road, Mandipete, Davangere.
Contact Us :
M/S R. HANUMANTHAPPA & SON
Hanumanthappa Buildings,
Poona-Bangalore Road, Davangere - 577 002.
Ph : 258834/258836 Mob : 94498 28834

**ಮಾನ್ಯ ಉಪ ವಿಭಾಗಾಧಿಕಾರಿಯವರ ನ್ಯಾಯಾಲಯ, ದಾವಣಗೆರೆ.**

**ಆರ್.ಎ.ನಂ. : 278/2024**

ಅಪೀಲುದಾರರು : ಕೊಟ್ರೇಶಿ ಬಿನ್ ಲೇಟ್ ಚನ್ನಬಸಪ್ಪ ಎಲಿಗಾರ್, ವಯಸ್ಕರು, ಕೂಲಿ ಕೆಲಸ, ವಾಸ : ಕವಲೆತ್ತು ಗ್ರಾಮ, ರಾಣೇಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.

ವಿರುದ್ಧ/- ಎದುರುದಾರರು : 1) ಮಾನ್ಯ ತಹಶೀಲ್ದಾರರು, ದಾವಣಗೆರೆ ತಾಲ್ಲೂಕು, ದಾವಣಗೆರೆ. 2) ಶ್ರೀಮತಿ ಪ್ರೇಮಾ ರಾಜಶೇಖರ್ ಕೋಂ ರಾಜಶೇಖರ್, ಗೃಹಿಣಿ, ವಾಸ : ಆಂಜನೇಯ ಬಡಾವಣೆ, ಮನೆ ನಂ : 641/117, ದಾವಣಗೆರೆ.

**ಸಿಪಿಸಿ ಆದೇಶ 5 ನಿಯಮ 20ರ ಅಡಿಯಲ್ಲಿ ಅಪೀಲುದಾರರ ಪರ ಸಲ್ಲಿಸಲಾದ ಪತ್ರಿಕಾ ಪ್ರಕಟಣೆ ನೋಟೀಸ್**

ಈ ಮೇಲ್ಕಂಡ ಅಪೀಲುದಾರರು ಈ ಅರ್ಜಿಯನ್ನು ಖಾತೆ ಬದಲಾವಣೆ ಕೋರಿ ಎದುರುದಾರರ ವಿರುದ್ಧ ಸಲ್ಲಿಸಿರುತ್ತಾರೆ. ಸದರಿ ಅಪೀಲಿನ 2ನೇ ಎದುರುದಾರರಾದ ಶ್ರೀಮತಿ ಪ್ರೇಮಾ ರಾಜಶೇಖರ್ ಗೃಹಿಣಿ, ವಾರ್ಡ್ ನಂ. 39, ಡೋರ್ ನಂ. 641/117, ಆಂಜನೇಯ ಬಡಾವಣೆ, 4ನೇ ಅಡ್ಡ ರಸ್ತೆ, ದಾವಣಗೆರೆ ಇವರಿಗೆ ಘನ ನ್ಯಾಯಾಲಯದಿಂದ ಸಮನ್ಸ್ ನೋಟೀಸ್ ನೋಂದಾಯಿತ ಅಂಚೆಯ ಮೂಲಕ ಹೊರಡಿಸಿದ್ದಾಗ್ಯೂ, 2ನೇ ಎದುರುದಾರರಿಗೆ ನೋಟೀಸ್ ಜಾರಿಯಾಗಿರುವುದಿಲ್ಲ. ಆದ ಕಾರಣ ಸದರಿ 2ನೇ ಎದುರುದಾರರಿಗೆ ಪತ್ರಿಕಾ ಪ್ರಕಟಣೆ ಮೂಲಕ ಸಮನ್ಸ್ ಜಾರಿಗೊಳಿಸುವುದು ಅವಶ್ಯವಿರುತ್ತದೆ.

ಈ ಪ್ರಕರಣದಲ್ಲಿ 2ನೇ ಎದುರುದಾರರು ದಿನಾಂಕ : 24.02.2025ರಂದು ಮಧ್ಯಾಹ್ನ 3.00 ಗಂಟೆಗೆ ಸರಿಯಾಗಿ ತಾವಾಗಿಯಾಗಲೀ ಅಥವಾ ತಮ್ಮ ಪರ ವಕೀಲರ ಮೂಲಕವಾಗಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.

ಈ ತಿಳುವಳಿಕೆಯನ್ನು ಇದೇ 2025ನೇ ಇಸ್ವಿ ಫೆಬ್ರವರಿ ಮಾಹೆ, ...ನೇ ತಾರೀಖಿನಂದು ನ್ಯಾಯಾಲಯದ ಮುದ್ರೆಯೊಂದಿಗೆ ಹಾಗೂ ನನ್ನ ಸಹಿಯೊಂದಿಗೆ ನೀಡಲಾಗಿದೆ.

**ದಿನಾಂಕ : 19.02.2025**
**ದಾವಣಗೆರೆ.**
**ಸಹಿ/- ಪಿ.ಬಿ. ಮಂಜುನಾಥ, ವಕೀಲರು,**
**ದಾವಣಗೆರೆ. 98455 99832**

**ನ್ಯಾಯಾಲಯದ ಆದೇಶದ ಮೇರೆಗೆ.**
ಸಹಿ/- ತಹಶೀಲ್ದಾರ್,
ಉಪ ವಿಭಾಗಾಧಿಕಾರಿಗಳವರ ಕಾರ್ಯಾಲಯ
ದಾವಣಗೆರೆ.

**ಹೃತ್ಪೂರ್ವಕ ಕೃತಜ್ಞತೆಗಳು**



*ದಿನಾಂಕ : 04.02.2025 ರಂದು ನಡೆದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಕಕ್ಕರಗೊಳ್ಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ನಿರ್ದೇಶಕರನ್ನಾಗಿ ಆಯ್ಕೆ ಮಾಡಲು ಸಹಕರಿಸಿದ ಕಕ್ಕರಗೊಳ್ಳ ಗ್ರಾಮದ ಎಲ್ಲಾ ಮುಖಂಡರಿಗೂ, ಹಿರಿಯರಿಗೂ, ಸರ್ವ ಸದಸ್ಯರಿಗೂ*
**ನಮ್ಮ ಹೃದಯಪೂರ್ವಕ ಕೃತಜ್ಞತೆಗಳು.**

**ಸುಭಾಷ್‌ಚಂದ್ರ, ಹೆಚ್.ಡಿ.** ಅಧ್ಯಕ್ಷರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಕಕ್ಕರಗೊಳ್ಳ.
**ಕಲ್ಲಿಂಗಪ್ಪ ಕೆ.ಪಿ.,** ಉಪಾಧ್ಯಕ್ಷರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಕಕ್ಕರಗೊಳ್ಳ.
ನಿರ್ದೇಶಕರುಗಳಾದ : ❖ ಮುದೇಗೌಡ್ರು ನಾಗರಾಜ್ ❖ ರಾಮಗೌಡ್ರು ಹನುಮಂತಪ್ಪ
❖ ಮಂಜುಳ ಕೋಂ ಹನುಮಂತಪ್ಪ ❖ ಗಂಗಮ್ಮ ಲೇಟ್ ರಾಮಪ್ಪ ❖ ತಳವಾರ ಜಯಪ್ಪ



# ಪರೀಕ್ಷಾ ಕರ್ತವ್ಯ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿ



**(1ನೇ ಪುಟದಿಂದ) ಪರೀಕ್ಷಾ ವೇಳಾಪಟ್ಟಿ :** ಮಾ. 1 ರಂದು ಕನ್ನಡ, ಅರೇಬಿಕ್, ಮಾ. 3-ಗಣಿತ, ಶಿಕ್ಷಣ ಶಾಸ್ತ್ರ, ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, ಮಾ. 4-ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಾ. 5 - ರಾಜ್ಯ ಶಾಸ್ತ್ರ, ಸಂಖ್ಯಾ ಶಾಸ್ತ್ರ, ಮಾ. 7 - ಇತಿಹಾಸ, ಭೌತಶಾಸ್ತ್ರ, ಮಾ. 10 - ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ, ಮಾ. 12 - ಮನಃಶಾಸ್ತ್ರ, ರಸಾಯನಶಾಸ್ತ್ರ, ಮೂಲ ಗಣಿತ, ಮಾ. 13 - ಅರ್ಥಶಾಸ್ತ್ರ, ಮಾ. 15- ಇಂಗ್ಲೀಷ್, ಮಾ.17 - ಭೂಗೋಳಶಾಸ್ತ್ರ, ಮಾ. 18 - ಜೀವಶಾಸ್ತ್ರ, ಸಮಾಜಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ, ಮಾ. 19 - ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೋಮೊಬೈಲ್, ಹೆಲ್ತ್ ಕೇರ್, ಬ್ಯೂಟಿ ಅಂಡ್ ವೆಲ್‌ನೆಸ್, ಮಾ.20 - ಹಿಂದಿ.

ವೆಬ್ ಕ್ಯಾಮೆರಾ ಮತ್ತು ಸಿಸಿಟಿವಿಗಳ ಬಗ್ಗೆ ಪರೀಕ್ಷೆ ಕೇಂದ್ರದ ಮುಖ್ಯ ನಿರೀಕ್ಷಕರು ಗಮನ ಹರಿಸಬೇಕೆಂದು ತಿಳಿಸಿದರು.

35 ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗುತ್ತಿದ್ದು, ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಲು ಅಗತ್ಯ ಕ್ರಮ ವಹಿಸಲಾಗುವುದು.

ಪ್ರಶ್ನೆ ಪತ್ರಿಕೆಯನ್ನು ಸ್ವೀಕರಿಸಿ, ಪರೀಕ್ಷಾ ಕೇಂದ್ರಗಳಿಗೆ ವಿತರಿಸುವ ವಾಹನಗಳಿಗೆ ಜಿ.ಪಿ.ಎಸ್ ಅಳವಡಿಸಲಾಗುವುದು. ಪರೀಕ್ಷಾ ಕೇಂದ್ರಗಳಿಗೆ ಮುಖ್ಯ ಅಧೀಕ್ಷಕರನ್ನು ನೇಮಿಸಲಾಗುವುದು ಎಂದರು.

ಪರೀಕ್ಷಾ ಕೇಂದ್ರದ ಕೊಠಡಿ ಮೇಲ್ವಿಚಾರಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಮೊಬೈಲ್ ಸೇರಿದಂತೆ ಯಾವುದೇ ವಿದ್ಯುನ್ಮಾನ ಉಪಕರಣಗಳನ್ನು ತರುವಂತಿಲ್ಲ. ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸುವ ಸಿಬ್ಬಂದಿ ಕಡ್ಡಾಯವಾಗಿ ಗುರುತಿನ ಚೀಟಿಯನ್ನು ಧರಿಸಬೇಕು ಎಂದರು.

ಡಿಡಿಪಿಐ ಕೊಟ್ರೇಶ್, ಡಯಟ್ ಉಪನಿರ್ದೇಶಕರಾದ ಗೀತಾ, ಖಜಾನೆ ಇಲಾಖೆಯ ಉಪನಿರ್ದೇಶಕಿ ಪ್ರಭಾವತಿ, ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪಾವತಿ, ದಾವಣಗೆರೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪ್ರಾಂಶುಪಾಲರು ಇದ್ದರು.

# ಉತ್ತಮ ರಾಜಕಾರಣಿ ಆಯ್ಕೆ ಜನರ ಹೊಣೆ

**(1ನೇ ಪುಟದಿಂದ)** ಜೊತೆಗೆ ಅವರಂತೆ ಬಾಳಲು ಪ್ರಯತ್ನಿಸಬೇಕು ಎಂದು ಹೇಳಿದರು.

ಜಾತ್ಯತೀತ ತತ್ವ, ಮಾನವೀಯತೆ, ಸಹೋದರತೆ, ಪ್ರೀತಿ, ವಿಶ್ವಾಸದ ಮೂಲಕ ಎಲ್ಲರೂ ಒಂದೇ ತಾಯಿ ಮಕ್ಕಳಂತೆ ಬಾಳುವ ಕೆಲಸವಾಗಬೇಕಿದೆ. ನಮ್ಮ ಧರ್ಮ ಪಾಲಿಸುತ್ತಾ, ಮತ್ತೊಂದು ಧರ್ಮವನ್ನು ಗೌರವಿಸುತ್ತಾ ಊರಿಗೆ ಗೌರವ ತರುವ ಜವಾಬ್ದಾರಿ ಎಲ್ಲರ ಮೇಲಿದೆ. ಸಮಾಜದ ಸಮಸ್ಯೆಗಳನ್ನು ಬಗೆಹರಿಸುವ ಗುಣಗಳು ಯುವಕರಲ್ಲಿ ಬರಬೇಕೇ ಹೊರತು, ಬಿಕ್ಕಟ್ಟು ಸೃಷ್ಟಿಸುವಂತಾಗಬಾರದು. ಇಮಾಂ ಸಾಹೇಬರ ಸಂದೇಶವೂ ಇದೇ ಆಗಿತ್ತು ಎಂದು ಅಭಿಪ್ರಾಯಿಸಿದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ಇಮಾಂ ಅವರ ಜೀವನ ಚರಿತ್ರೆಯನ್ನು ಓದಿ, ಅವರ ಆದರ್ಶ, ಮೌಲ್ಯ, ಸಾಧನೆಗಳನ್ನು ಅರ್ಥ ಮಾಡಿಕೊಂಡು, ಅವರ ಆದರ್ಶವನ್ನು ನಾವೂ ಅಳವಡಿಸಿಕೊಂಡರೆ ಅವರಂತೆ ಸಮಾಜ ಮುಖಿಯಾಗಿ ಬಾಳಬಹುದು ಎಂದರು.

ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿ, ಚಿತ್ರದುರ್ಗ ಹಾಗೂ ತುಮಕೂರು ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ. ಅವರ ಸಾಧನೆ, ಪ್ರಾಮಾಣಿಕತೆಯನ್ನು ಮೆಚ್ಚಿ ಜನರು ಅವರನ್ನು ಆಯ್ಕೆ ಮಾಡಿದ್ದಾರೆ. ಅಂತಹ ರಾಜಕಾರಣಿ ನಾವಾಗಬೇಕು ಎಂಬ ಸಂದೇಶವನ್ನು ಅವರು ನೀಡಿದ್ದಾರೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ದಾದಾಪೀರ್ ನವಿಲೇಹಾಳ್, ಅನೇಕ ಪ್ರಸಿದ್ಧ ಲೇಖಕರು, ಚಿಂತಕರು ಸೇರಿದಂತೆ ಎಲ್ಲಾ ಮಹತ್ವದ ಲೇಖಕರು ಬರೆದ ಲೇಖನಗಳನ್ನು 'ಮಾನವತೆಯ ಬೆಳಕು' ಪುಸ್ತಕದಲ್ಲಿವೆ. ಇಂದಿನ ರಾಜಕಾರಣಕ್ಕೆ ಮಾನವೀಯ ಸ್ಪಷ್ಟತೆ ಉಂಟುಮಾಡುವ ಸಂಗತಿಗಳು ಪುಸ್ತಕದಲ್ಲಿ ಹೇರಳವಾಗಿವೆ. ಇದು ಎಲ್ಲರನ್ನೂ ತಲುಪಬೇಕು ಎಂದು ಹೇಳಿದರು.

ಶಾಸಕರುಗಳಾದ ಬಿ.ದೇವೇಂದ್ರಪ್ಪ, ಕೆ.ಎಸ್. ಬಸವಂತಪ್ಪ, ಅಬ್ದುಲ್ ಜಬ್ಬಾರ್, ಟ್ರಸ್ಟ್ ಅಧ್ಯಕ್ಷ ಜೆ.ಕೆ.ಹುಸೇನ್ ಮಿಯ್ಯಾ ಸಾಬ್, ಮಾಜಿ ಮೇಯರ್ ಕೆ.ಚಮನ್ ಸಾಬ್, ಪಿಂಜಾರ ನದಾಫ್ ಸಂಘದ ರಾಜ್ಯ ಘಟಕದ ಅಧ್ಯಕ್ಷ ಜಲೀಲ್ ಸಾಬ್, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಬಿ.ವಾಮದೇವಪ್ಪ, ಉದ್ಯಮಿ ದಾದಾ ಖಲಂದರ್, ಲೇಖಕ ಎನ್.ಟಿ.ಯರ್ರಿಸ್ವಾಮಿ, ಆದಾಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ಗುರು ಹಾಜರಿದ್ದರು. ಪದ್ಮಶ್ರೀ ಪ್ರಾರ್ಥಿಸಿದರು. ಎಂ. ಶಿಲ್ಪ ಸ್ವಾಗತಿಸಿದರು.

# ನಾಟಕೋತ್ಸವ, ರಂಗಗೀತೆ ಕಾರ್ಯಕ್ರಮ



ದಾವಣಗೆರೆ, ಜ.24- ಕಲಾ ವಿಕಾಸ ಸಂಘ ನಾಟಕ ಸಂಘ ಮತ್ತು ಲಯನ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ದೇವರಾಜ್ ಅರಸ್ ಬಡಾವಣೆಯ ಲಯನ್ಸ್ ಕ್ಲಬ್‌ನಲ್ಲಿ ಬುಧವಾರ ನಾಟಕೋತ್ಸವ ಹಾಗೂ ರಂಗ ಗೀತೆ ಕಾರ್ಯಕ್ರಮ ನಡೆಯಿತು. ಈ ವೇಳೆ ಲಯನ್ಸ್ ಮಾಜಿ ಗೌರ್ನರ್ ಡಾ.ಬಿ.ಎಸ್. ನಾಗಪ್ರಕಾಶ್, ಉಪಾಧ್ಯಕ್ಷ ಎನ್.ಸಿ. ಬಸವರಾಜ್, ಸಿದ್ದರಾಮಪ್ಪ ಬುಳ್ಳಸಾಗರ, ಆಶಾ ಉಮೇಶ್, ಮಾಂತೇಶ್ ಒಣರೊಟ್ಟಿ, ಎಸ್.ಎ. ಮೃತ್ಯುಂಜಯ ಇತರರು ಇದ್ದರು.

## ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಂದ ಅರ್ಜಿ

ದಾವಣಗೆರೆ, ಫೆ.20 - ಪ್ರಸಕ್ತ ಸಾಲಿನ ಹಿಂದುಳಿದ ವರ್ಗಗಳ ಅಲೆಮಾರಿ ಮತ್ತು ಅರೆ ಅಲೆಮಾರಿ ಪ್ರವರ್ಗ-1 ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ಶುಲ್ಕ ವಿನಾಯಿತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಮಾರ್ಚ್ 10 ರವರೆಗೆ ವಿಸ್ತರಿಸಲಾಗಿದೆ. ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಹಿಂದುಳಿದ ವರ್ಗಗಳ ಜಿಲ್ಲಾ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ .

# ಸಂಪುಟದ ಅನುಮೋದನೆ

**(1ನೇ ಪುಟದಿಂದ)** ವಿವಿಧ ವಸತಿ ಯೋಜನೆಗಳಡಿ ಮನೆ ನೀಡಲು ಸಂಪುಟ ಸಮ್ಮತಿಸಿದೆ.

ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಹಾಗೂ ಬೆಂಗಳೂರಿನ ಐಐಟಿ-ಬಿ ಸಂಸ್ಥೆಯ ಮೂಲಸೌಕರ್ಯ ವಿಸ್ತೀರ್ಣ ಯೋಜನೆಗೆ 817 ಕೋಟಿ ರೂ. ಮಂಜೂರು ಮಾಡಲಾಗಿದೆ.

ಹಾಸನ ಜಿಲ್ಲೆ ಅರಸೀಕೆರೆಯ ಬಾಣಾವರ ಪಂಚಾಯತ್ ಅನ್ನು ಪಟ್ಟಣ ಪಂಚಾಯತ್ ಆಗಿ ಉನ್ನತೀಕರಣಕ್ಕೆ ಅನುಮೋದನೆ ನೀಡಲಾಗಿದೆ. ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ 5,000 ಆಧುನಿಕ ಉಪಕರಣಗಳ ಖರೀದಿಗೆ 175 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಡೆಸುವ 61 ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 1,292.50 ಕೋಟಿ ರೂ. ಅಂದಾಜು ವೆಚ್ಚಕ್ಕೆ ಸಂಪುಟ ಅನುಮೋದನೆ ನೀಡಿದೆ.

ಮೈಸೂರಿನಲ್ಲಿನ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ ಅಭಿವೃದ್ಧಿಗೆ ರಾಜ್ಯ ಸಚಿವ ಸಂಪುಟ 20 ಕೋಟಿ ರೂ. ಬಿಡುಗಡೆಗೆ ಅನುಮೋದನೆ ನೀಡಿದೆ. ಅರಮನೆ ನಗರವನ್ನು ಪ್ರವಾಸಿ ಕೇಂದ್ರವಾಗಿ ಮತ್ತಷ್ಟು ಅಭಿವೃದ್ಧಿಪಡಿಸುವ ಮತ್ತು ಅಂತಾರಾಷ್ಟ್ರೀಯ ಮಟ್ಟದ ವಸ್ತು ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

# ಹರಿಹರ : ಬಾತಿ ಚಂದ್ರಶೇಖರ್‌ಗೆ ಗೌರವ ಸಮರ್ಪಣೆ



ಹರಿಹರ, ಫೆ.20 - ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮ ಶತಮಾನೋತ್ಸವ ವರ್ಷಾಚರಣೆ ಅಂಗವಾಗಿ ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ, ದೂಡಾ ಸದಸ್ಯ ಬಾತಿ ಚಂದ್ರಶೇಖರ್ ಅವರಿಗೆ ಅಟಲ್ ಜೀ ಶತಮಾನೋತ್ಸವ ಸಮಿತಿ ಹಾಗೂ ಜಿಲ್ಲಾ ಬಿಜೆಪಿಯ ವತಿಯಿಂದ ಗೌರವ ಸಮರ್ಪಣೆ ಮಾಡಲಾಯಿತು.

ಅಟಲ್ ಜೀ ಜನ್ಮ ಶತಮಾನೋತ್ಸವ ವರ್ಷಾಚರಣೆಯ ರಾಜ್ಯ ಪ್ರಮುಖ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಎಚ್. ಶಿವಯೋಗಿಸ್ವಾಮಿ, ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ರಾಜಶೇಖರ್ ನಾಗಪ್ಪ, ಮಾಜಿ ಜಿಲ್ಲಾ ಅಧ್ಯಕ್ಷ ಹನಗವಾಡಿ ವೀರೇಶ್, ಲೋಕಿಕೆರೆ ನಾಗರಾಜ್, ಶತಮಾನೋತ್ಸವ ಜಿಲ್ಲಾ ಸಮಿತಿಯ ಪ್ರಮುಖ ಐ.ಓ. ಕಲ್ಲೇಶ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೆಬಾಳು ಕಾರ್ಯಕ್ರಮ ಕುರಿತು ಮಾತನಾಡಿದರು.

ಐರಣಿ ಅಣ್ಣೇಶ್,ಜಿಲ್ಲಾ ಬಿಜೆಪಿ ಮಾಧ್ಯಮ ಪ್ರಮುಖ ಹೆಚ್.ಪಿ. ವಿಶ್ವಾಸ್, ಜಿಲ್ಲಾ ಸಾಮಾಜಿಕ ಜಾಲತಾಣದ ಪ್ರಮುಖ ಕೊಟ್ರೇಶ ಗೌಡ, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಗ್ರಾಮಾಂತರ ಅಧ್ಯಕ್ಷ ಲಿಂಗರಾಜ್ ಎಂ.ಪಿ., ಪ್ರ.ಕಾರ್ಯದರ್ಶಿ ತುಳಜಪ್ಪ ಭೂತೆ, ಎಸ್ಸಿ ಮೋರ್ಚಾ ಅಧ್ಯಕ್ಷ, ಮಂಡಲ ಸಾಮಾಜಿಕ ಜಾಲತಾಣ ಪ್ರಮುಖ್ ಸಂತೋಷ ಗುಡಿಮನಿ, ಯುವ ಮುಖಂಡರಾದ ರಾಚಪ್ಪ, ಪ್ರಕಾಶ ಶೆಟ್ಟಿ, ಬಾತಿ ಶರತ್ ಚಂದ್ರಶೇಖರ್, ವಿನಾಯಕ ಆರಾಧ್ಯಮಠ ಸೇರಿದಂತೆ ಇತರರಿದ್ದರು.

# ಮುಂಗಾರು ಪೂರ್ವದಲ್ಲಿ ವಾಡಿಕೆಗಿಂತ ಹೆಚ್ಚು ಮಳೆ

**(1ನೇ ಪುಟದಿಂದ)** ಸಚಿವ ಚೆಲುವರಾಯಸ್ವಾಮಿ ಅವರೂ ಈ ಸಭೆಯಲ್ಲಿ ಭಾಗವಹಿಸಿದ್ದರು.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಉತ್ತಮ ಮಳೆಯಾಗಲಿದೆ. ಫೆಬ್ರವರಿ ಮತ್ತು ಮಾರ್ಚ್ ಕೊನೆಯ ವಾರದಲ್ಲಿ ಮಳೆ ಹೆಚ್ಚಾಗುವ ಸಾಧ್ಯತೆಯೂ ಇದೆ ಎಂದು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

ಫೆಬ್ರವರಿಯಲ್ಲಿ ತಾಪಮಾನ ಇದುವರೆಗೂ ಸರಾಸರಿಗಿಂತ 2.5 ಡಿಗ್ರಿ ಸೆಲ್ಸಿಯಸ್ ಹೆಚ್ಚಿನ ಹಂತದಲ್ಲಿದೆ. ಆದರೆ, ತಿಂಗಳ ಕೊನೆಯ ವಾರದಲ್ಲಿ ತಾಪಮಾನ ಕಡಿಮೆಯಾಗುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯಾದ್ಯಂತ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳುವಂತೆ ಕಂದಾಯ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ವೇಳೆ ಪ್ರಮುಖ ಜಲಾಶಯಗಳಲ್ಲಿ ಪ್ರಸ್ತುತ ನೀರಿನ ಸಂಗ್ರಹವನ್ನು ಸಂಪುಟ ಉಪಸಮಿತಿ ಪರಿಶೀಲಿಸಿತು.

ಕೆಲವು ಜಲಾಶಯಗಳಲ್ಲಿನ ನೀರಿನ ಮಟ್ಟ ಕಡಿಮೆಯಾಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಚಿವ ಕೃಷ್ಣ ಭೈರೇಗೌಡ, ನೀರಾವರಿ ಅಗತ್ಯತೆಗಳು ಮತ್ತು ಭವಿಷ್ಯದ ಕುಡಿಯುವ ನೀರಿನ ಅಗತ್ಯಗಳನ್ನು ಪರಿಗಣಿಸಿ ಲಭ್ಯವಿರುವ ನೀರನ್ನು ಎಚ್ಚರಿಕೆಯಿಂದ ನಿರ್ವಹಿಸುವಂತೆ ತಿಳಿಸಿದರು.

# ಸ್ವಾಮಿ ವಿವೇಕಾನಂದ ಶಾಲಾ ವಾರ್ಷಿಕೋತ್ಸವ ಸಂಭ್ರಮ



ದಾವಣಗೆರೆ, ಜ.20- ನಗರದ ಬನಶಂಕರಿ ಬಡಾವಣೆಯಲ್ಲಿನ ಸ್ವಾಮಿ ವಿವೇಕಾನಂದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಕಳೆದ ವಾರ 35ನೇ ಶಾಲಾ ವಾರ್ಷಿಕೋತ್ಸವ ಸಂಭ್ರಮದಿಂದ ನಡೆಯಿತು.

ಮಕ್ಕಳ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಂಡಿದ್ದ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಟೀಂ ಅಕಾಡೆಮಿಯ ಅಧ್ಯಕ್ಷ ಕೆ.ಎಂ. ಮಂಜಪ್ಪ, ಕಾರ್ಯದರ್ಶಿ ನಾಗಭೂಷಣ್, ಶಾಲೆಯ ಮುಖ್ಯ ಶಿಕ್ಷಕ ಪರಮೇಶ್ವರಪ್ಪ, ಸಹ ಶಿಕ್ಷಕರಾದ ರಾಜಶೇಖರ್, ಕಲ್ಲೇಶ್, ವಿಶ್ವನಾಥ್, ಮಂಜುಳಾ, ಮಂಜುಶ್ರೀ ಶಾಲೆಯ ಸಿಬ್ಬಂದಿ ಹಾಗೂ ಇದ್ದರು.

# ಹೈಕೋರ್ಟ್ ಹಾಲಿ ಜಡ್ಜ್ ವಿರುದ್ಧದ ದೂರು ದಾಖಲು

**(1ನೇ ಪುಟದಿಂದ)** ಹಾಲಿ ನ್ಯಾಯಮೂರ್ತಿ ವಿರುದ್ಧ ದೂರುಗಳನ್ನು ದಾಖಲಿಸಿದ ವ್ಯಕ್ತಿಗೆ ನೋಟಿಸ್ ಕಳಿಸಿದೆ.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮಾತನಾಡಿ, ಹೈಕೋರ್ಟ್ ನ್ಯಾಯಮೂರ್ತಿ ಎಂದೂ ಲೋಕಪಾಲ್ ಹಾಗೂ ಲೋಕಾಯುಕ್ತ ಕಾಯ್ದೆ ವ್ಯಾಪ್ತಿಗೆ ಬರುವುದಿಲ್ಲ ಎಂದರು. ದೂರಿಗೆ ಸಂಬಂಧಿಸಿದ ಹೈಕೋರ್ಟ್ ನ್ಯಾಯಮೂರ್ತಿ ಹೆಸರು ಬಹಿರಂಗಪಡಿಸಬಾರದು ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಅಭಯ್ ಎಸ್. ಓಕ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ಜನವರಿ 27ರಂದು ಲೋಕಪಾಲರು ಹೊರಡಿಸಿದ ಆದೇಶಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತವಾಗಿ ವಿಚಾರಣೆ ನಡೆಸುತ್ತಿದೆ.

## ರಾಜ್ಯ ಮಟ್ಟದ 'ಅಂಚೆ ಕುಂಚ' ಸ್ಪರ್ಧೆ

ದಾವಣಗೆರೆ, ಫೆ.20- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಮಹಾ ಶಿವರಾತ್ರಿ ಪ್ರಯುಕ್ತ ರಾಜ್ಯ ಮಟ್ಟದ ಉಚಿತ 'ಅಂಚೆ ಕುಂಚ' ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

50 ಪೈಸೆ ಅಂಚೆ ಕಾರ್ಡಿನಲ್ಲಿ ಈಶ್ವರನ ಚಿತ್ರ ಬರೆಯುವುದು ಸ್ಪರ್ಧೆಯ ವಿಷಯವಾಗಿದ್ದು, ಇದೇ ದಿನಾಂಕ 25ರೊಳಗಾಗಿ ಕಚೇರಿಯ ವಿಳಾಸಕ್ಕೆ ಚಿತ್ರ ಕಳಿಸಬಹುದಾಗಿದೆ. ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ 'ಕನ್ನಡ ಕೃಪಾ' ಕುವೆಂಪು ರಸ್ತೆ, ಕೆ.ಬಿ.ಬಡಾವಣೆ, ದಾವಣಗೆರೆ-577002

ಸ್ಪರ್ಧಿಗಳು ಕನ್ನಡದಲ್ಲಿ ವಿಳಾಸ, ವಯಸ್ಸು, ವ್ಯಾಟ್ಸಾಪ್ ಸಂಖ್ಯೆಯನ್ನು ಕಳಿಸಬೇಕು. ಆಂಗ್ಲ ಭಾಷೆಯಲ್ಲಿ ವಿಳಾಸವಿದ್ದರೆ ಸ್ವೀಕರಿಸುವುದಿಲ್ಲ. ವಿವರಕ್ಕೆ ಸಂಪರ್ಕಿಸಿ : 9538732777.

# ಮುಡಾ ಹಗರಣ: ಅಧಿಕಾರಿಗಳು ಖಾಸಗಿ ಸಂಸ್ಥೆಯಿಂದ ಎಡವಟ್ಟು

**(1ನೇ ಪುಟದಿಂದ)** ನಿವೇಶನಗಳನ್ನೂ ಹಿಂತಿರುಗಿಸಿದ್ದಾರೆಂದು ಲೋಕಾಯುಕ್ತ ತನ್ನ ವರದಿಯಲ್ಲಿ ತಿಳಿಸಿದೆ.

ಮಲ್ಲಿಕಾರ್ಜುನ ಸ್ವಾಮಿ ಮತ್ತು ಪಾರ್ವತಿ ಮಧ್ಯೆ ಜಮೀನು ವರ್ಗಾವಣೆ ಕಾನೂನಾತ್ಮಕವಾಗಿ ನಡೆದಿದೆ, ಆದರೆ, ದೇವರಾಜುಗೆ ಸಂಬಂಧಿಸಿದಂತಹ ಡಿ-ನೋಟಿಫೈ ಪ್ರಕ್ರಿಯೆಯಲ್ಲಿ ಮುಡಾ ಲೋಪ ಎಸಗಿದೆ.

ದೇವರಾಜು ಸರ್ಕಾರಿ ಸೇವೆಯಲ್ಲಿ ಇರುವುದನ್ನು ಮರೆಮಾಚಿರುವುದಲ್ಲದೆ, ಡಿ-ನೋಟಿಫೈ ವೇಳೆ ತಮಗಿರುವ ಆಸ್ತಿ-ಪಾಸ್ತಿಗಳ ಬಗ್ಗೆಯೂ ವಿವರ ನೀಡಿಲ್ಲ. ಆದ್ದರಿಂದ ಪ್ರಕರಣದಲ್ಲಿ ಬೇರೆ ಯಾರ ಪಾತ್ರವೂ ಇಲ್ಲ ಎಂಬುದು ನಮ್ಮತನಿಖಾ ವರದಿಯಿಂದ ತಿಳಿದುಬಂದಿದೆ.

ಅಧಿಕಾರಿಗಳು ಮತ್ತು ಖಾಸಗಿ ಸಂಸ್ಥೆ ಬಹಳಷ್ಟು ಎಡವಟ್ಟು ಮಾಡಿವೆ. ಕೆಸರೆ ಗ್ರಾಮದ ಸ್ಥಳವನ್ನು ಬಡಾವಣೆ ಮಾಡಲು ವಶ ಪಡಿಸಿಕೊಳ್ಳಲಾಗಿತ್ತು. ನಂತರ ರಸ್ತೆ, ನಿವೇಶನಗಳನ್ನು ಮಾಡಲು ಹಾಗೂ ಇತರ ಮೂಲಸೌಕರ್ಯ ಕಲ್ಪಿಸಲು ಎಲ್ ಅಂಡ್ ಟಿ ಕಂಪನಿಗೆ ನೀಡಲಾಗಿತ್ತು.

ಈ ವೇಳೆ ವಿವಾದಿತ 3.18 ಎಕರೆ ಪ್ರದೇಶ ಡಿ-ನೋಟಿಫೈ ಆಗಿದೆ ಎಂಬುದಾಗಿ ನಕಾಶೆಯಲ್ಲಿ ತೋರಿಸಲಾಗಿತ್ತು. ಆದರೆ, ಎಲ್ ಅಂಡ್ ಟಿ ಅವರು ಡಿ-ನೋಟಿಫೈ ಆಗಿರುವ ಜಮೀನನ್ನೂ ಅಭಿವೃದ್ಧಿ ಮಾಡಿದ್ದಾರೆ.

ಇಂತಹ ಎಡವಟ್ಟನ್ನು ಮುಡಾ ಅಧಿಕಾರಿಗಳು ಗಮನಿಸದೆ ಭಾರೀ ಲೋಪ ಮಾಡಿದ್ದಾರೆ, ಅಷ್ಟೇ ಅಲ್ಲ, ಅಭಿವೃದ್ಧಿ ಆದ ನಂತರ ನಿವೇಶನಗಳ ಹಂಚಿಕೆಯನ್ನೂ ಮಾಡಿದ್ದಾರೆ. ಹೀಗಾಗಿ ಎಲ್ ಅಂಡ್ ಟಿ ಮತ್ತು ಮುಡಾ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎನ್ನುವುದು ತನಿಖೆಯಿಂದ ತಿಳಿದುಬಂದಿದೆ.

ಕೃಷಿ ಭೂಮಿ ಪರಿವರ್ತನೆ ಸಮಯದಲ್ಲೂ ಕಂದಾಯ ಅಧಿಕಾರಿಗಳು ಲೋಪ ಎಸಗಿದ್ದಾರೆ, ಜಮೀನು ಇರುವ ಸ್ಥಳಕ್ಕೆ ಹೋಗದೆ ಕಚೇರಿಯಲ್ಲೇ ಕುಳಿತು ಪರಿವರ್ತನೆ ಪ್ರಕ್ರಿಯೆ ಪೂರ್ಣಗೊಳಿಸಿ ನಿರ್ಲಕ್ಷ್ಯ ತೋರಿದ್ದಾರೆ.

ಹೈಕೋರ್ಟ್ ತೀರ್ಪನ್ನು ಆಧಾರವಾಗಿಟ್ಟುಕೊಂಡು ಮುಡಾ, ಮುಖ್ಯಮಂತ್ರಿ ಕುಟುಂಬಕ್ಕೆ 14 ನಿವೇಶನಗಳನ್ನು ಹಂಚಿಕೆ ಮಾಡಿರುವುದಷ್ಟೇ ಅಲ್ಲ, ಉಳಿದ 130 ಪ್ರಕರಣಗಳಲ್ಲೂ ಪರ್ಯಾಯ ನಿವೇಶನಗಳನ್ನು ಹಂಚಿದ್ದಾರೆ.

ಹೀಗಾಗಿ ಪರ್ಯಾಯ ಪರಿಹಾರ ಕೊಟ್ಟಿರುವ ಬಗ್ಗೆ ಸಮಗ್ರ ತನಿಖೆ ನಡೆಸಬೇಕಿದೆ. ವರದಿಯಲ್ಲಿನ ಅಧಿಕಾರಿಗಳ ತಪ್ಪಿನ ತನಿಖೆ ಬಗ್ಗೆ ಕೋರ್ಟ್ ತೀರ್ಮಾನ ಕೈಗೊಳ್ಳಬೇಕು ಎಂದು ಲೋಕಾಯುಕ್ತ ಮನವಿ ಮಾಡಿದೆ.


**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ, 40 ಅಡಿ ರಸ್ತೆಗೆ ಹೊಂದಿಕೊಂಡು ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮಾರಾಟಕ್ಕಿದೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ, ಡಾಲರ್ಸ್ ಕಾಲೋನಿ, ಕುಂದುವಾಡ, ಹೂಡಿಕೆ ಸೈಟುಗಳು ಮತ್ತು ಯರಗುಂಟೆಯಲ್ಲಿ ಹೂಡಿಕೆ ಸೈಟುಗಳು 30x40, 30x50, 40x60 ಎಲ್ಲಾ ಫ್ಲಾಟುಗಳು ದಾವಣಗೆರೆಯಲ್ಲಿವೆ.
097315 12365

**ಬೇಕಾಗಿದ್ದಾರೆ**
ಲಾಡ್ಜ್ ನಲ್ಲಿ ಹಗಲು ಮತ್ತು ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ರಿಸೆಪ್ಷನಿಸ್ಟ್ / Tally ಆಪರೇಟರ್ ಬೇಕಾಗಿದ್ದಾರೆ ಹಾಗೂ ರೂಂ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
98451 51589

**ಬಾಡಿಗೆಗೆ**
Old PB Road, Trends Man, Titan World Bldg, Covered Terrace - 3600 Sqft Basement-30x15 Godowns
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮೊದಲನೇ ಮಹಡಿ 3500 ಅಡಿಗಳು
94480 28103

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ, ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 16,000/- OT ಸಿಗುತ್ತದೆ. ವಸತಿ ಸೌಲಭ್ಯವಿದೆ.
97400 98047

**ಬೇಕಾಗಿದ್ದಾರೆ**
ನಮ್ಮ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷರು ಮಾತ್ರ. ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ಸೈಟುಗಳು ಮಾರಾಟಕ್ಕಿವೆ**
ಯರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**ಟೈರ್ ಕ್ಲಬ್**
ಕಾರ್ ವಾಷಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿಳಾಸ : ಸಾಯಿ ಇಂಟರ್‌ನ್ಯಾಷನಲ್ ಹೋಟೆಲ್ ಹತ್ತಿರ, ರಾಯಲ್ ಓಕ್ ಎದುರುಗಡೆ, ಪಿ.ಬಿ. ರಸ್ತೆ, ದಾವಣಗೆರೆ.
(ಸಂಬಳ : 14,000 ರೂ.)
73488 82183 / 90356 56519

**ಮಾರಾಟಕ್ಕಿವೆ**
ಶಿರಾ ಹತ್ತಿರದ ಮದ್ದನಾಯಕನಹಳ್ಳಿ 6x2, 6x3, 6x4 ಅಳತೆಯ ಕಲ್ಲುಗಳು ಮಾರಾಟಕ್ಕಿವೆ
94480 28103
(4 PM to 8 PM)

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಖಾನಾವಳಿಯಲ್ಲಿ ಕೆಲಸ ಮಾಡಲು ಮಹಿಳಾ ಅಡುಗೆ ಭಟ್ಟರು ಬೇಕಾಗಿದ್ದಾರೆ.
98800 15555

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಹೆಲ್ಪರ್ ಕೆಲಸಕ್ಕೆ ಹಾಗೂ ಪಾತ್ರೆ ತೊಳೆಯಲಿಕ್ಕೆ ಪುರುಷ / ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ಅವಶ್ಯಕತೆ ಇದ್ದವರು ಸಂಪರ್ಕಿಸಿ.
78203 08559

**CRASH COURSE FOR CLASS 10 CBSE / STATE**
* End of March to Mid of May, * 5 1/2 hrs. of effective teaching each day, * Maths & Science
Pi Academy, DVG-04
Sri S. Nijalingappa Layout.
99642 29344, 89513 67178
95911 27363

**FOR RENT**
Independent duplex house with four bed rooms attached bath & house with 2 bed rooms having all facilities 2nd floor at MCC B Block, 3rd main, 6th cross behind gundi School.
M : 99008 33644

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

**ಹುಡುಗರು ಬೇಕಾಗಿದ್ದಾರೆ**
ಅಮೂಲ್ ಐಸ್‌ಕ್ರೀಮ್
ಬಾಯ್ಸ್ ಹಾಸ್ಟೆಲ್ ಎದುರು, ಅನಂತ ಭವನ್ ಹತ್ತಿರ, ದಾವಣಗೆರೆ.
ಸಮಯ : 9am ರಿಂದ 3pm ರವರೆಗೆ 3pm ರಿಂದ 11pm
78920 82256

**ಇಂಡಸ್ಟ್ರೀಯಲ್ ಜಾಗ ಮಾರಾಟಕ್ಕಿದೆ**
ಹಾಲಿ ಬಾಡಿಗೆ ಬರುತ್ತಿರುವ ಅಂದಾಜು 19000 Sqft ಜಾಗ ಮತ್ತು ಶೆಡ್ ಮಾರಾಟಕ್ಕಿದೆ. ಲಾಡ್ಜ್, ಗೋಡೋನ್, ಶೋರೂಂ, ನರ್ಸಿಂಗ್ ಹೋಂ ಹಲವಾರು ಉದ್ದೇಶಕ್ಕೆ ಉಪಯುಕ್ತವಾಗಿರುವ, ಪಿ.ಬಿ. ರಸ್ತೆಗೆ, ಹತ್ತಿರದಲ್ಲಿ 40 ಅಡಿ ರಸ್ತೆಗೆ ಪೂರ್ವಕ್ಕೆ ರಸ್ತೆ ಇರುವ 180x110 ಅಡಿ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ :
94481 80019

**ರೆಸ್ಟೋರೆಂಟ್ ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯ ಇರುವ ರೆಸ್ಟೋರೆಂಟ್ ಬಾಡಿಗೆಗೆ ಇದೆ.
96638 28812

**ಹೊಸ ಲೇಔಟ್ ಸೈಟ್‌ಗಳು**
1950 Rs. Sqft ರಿಂದ 2500 ರ ವರೆಗೂ ದೊಡ್ಡ ಬಾತಿ ಹತ್ತಿರ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
81235 29544

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ಆಟೋ ಡ್ರೈವರ್, ಟಾಟಾ ACE ಡ್ರೈವರ್ ಮತ್ತು ಅಂಗಡಿಯ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
ಶಿವಪ್ಪ ಸರ್ಕಲ್, ದಾವಣಗೆರೆ.
96860 22969

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ಬೇಕಾಗಿದ್ದಾರೆ**
ಕಾರ್ ವಾಟರ್ ವಾಶ್ ಸರ್ವೀಸ್ ಸ್ಟೇಷನ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ : ಕಾರ್ ಹೆಲ್ತ್ ವಾಟರ್ ಸರ್ವೀಸ್ ಸ್ಟೇಷನ್, ಮಾಗನೂರು ಬಸಪ್ಪ ಪೆಟ್ರೋಲ್ ಬಂಕ್ ಹಿಂಭಾಗ, ಹದಡಿ ರಸ್ತೆ, ದಾವಣಗೆರೆ.
99009 30270, 81057 00885

ರಕ್ತ ದಾನ ಶ್ರೇಷ್ಠ ದಾನ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೈಟು ಮಾರಾಟಕ್ಕಿದೆ**
ಹಳೇ ಕುಂದವಾಡದಲ್ಲಿರುವ 29.98 ×28.93= 868 ಅಳತೆಯ (ದಕ್ಷಿಣ) ಸೈಟು ಹಾಗೂ ಹರಿಹರದ ಶೇರಾಪುರದಲ್ಲಿ (ನೌಕರ ಸಂಘದವರು ನಿರ್ಮಿಸುತ್ತಿರುವ ಲೇಔಟ್ ಹತ್ತಿರ) 40×60 (ಉತ್ತರ)KHB ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ.
99723 43286

**ಮಾರಾಟಕ್ಕಿದೆ**
ಅತ್ಯುತ್ತಮ ಸ್ಥಿತಿಯ ಒಂದು ವರ್ಷದ ಹಳೆಯ ಬೇಕರಿ ಗ್ಲಾಸ್ ಕೌಂಟರ್‌ಗಳು ಮಾರಾಟಕ್ಕಿವೆ.
ಸಂಪರ್ಕಿಸಿ:
95388 96927

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಕೆಲಸಕ್ಕೆ ಬೇಕಾಗಿದ್ದಾರೆ**
ಲೇಡಿಸ್ ಟೆಲಿ ಮಾರ್ಕೆಟಿಂಗ್ ಸಂಬಳ 9000/- 60 feet ರೋಡ್, ಆಶಾ ವೈನ್ ಶಾಪ್, ಓಲ್ಡ್ ಕಾರ್ಪೋರೇಟರ್ ಆಫೀಸ್ ಬಾಯ್ಸ್, ಬೈಕ್ ಇದ್ದವರಿಗೆ 14000/- ಬೈಕ್ ಇಲ್ಲದವರಿಗೆ 12000/-
9591750723, 7899951681

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**REQUIRED**
SECURITY FIELD OFFICER REQUIRED
95350 58671

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬೇಕಾಗಿದ್ದಾರೆ**
NDF Security Solution India Pvt. LTD., ಕಂಪನಿಯಲ್ಲಿ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ :
98448 08903
96631 43409

**ಬೇಕಾಗಿದ್ದಾರೆ**
ನಮ್ಮ ಶೋರೂಂನಲ್ಲಿ ಸೇಲ್ಸ್ ಮಾಡಲು ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ. ಪರಿಚಯದೊಂದಿಗೆ ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸಾರೀ ಸೆಂಟರ್
ಬಿನ್ನಿ ಕಂಪನಿ ರೋಡ್ ದಾವಣಗೆರೆ 577001


**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776

**ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ**
SAI SRI INDUSTRIES
Near Sub Register Office, Behind MRF Tyres Showroom.
98862 55308, 96111 14244

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

# ಯುವಕರ ಸಮಾವೇಶ, ಶಿಕ್ಷಕರಿಗಾಗಿ ಪ್ರಬುದ್ಧ ಚಿಂತನಾಗೋಷ್ಠಿ, ಭಕ್ತಿ ರಸಗಂಗೆ



**ನಗರದಲ್ಲಿ ಇಂದು**

ದಾವಣಗೆರೆ, ಫೆ.20- ರಾಮಕೃಷ್ಣ ಮಿಷನ್ ವತಿಯಿಂದ ನಗರದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನದಲ್ಲಿ ನಾಳೆ ದಿನಾಂಕ 21ರ ಶುಕ್ರವಾರ ಬೆಳಿಗ್ಗೆ 9ರಿಂದ ರಾತ್ರಿ 8.30ರ ವರೆಗೆ ಯುವಕರು, ಶಿಕ್ಷಕರು ಹಾಗೂ ಭಕ್ತರಿಗಾಗಿ 3 ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಮಿಷನ್ ಕಾರ್ಯದರ್ಶಿ ಶ್ರೀ ಸ್ವಾಮಿ ತ್ಯಾಗೀಶ್ವರಾನಂದರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶುಕ್ರವಾರ ಬೆಳಿಗ್ಗೆ 9ರಿಂದ 12ರ ವರೆಗೆ ಯುವಕರಿಗಾಗಿ ಸಮಾವೇಶ (ವಿವೇಕ ಚಿಂತನೆ) ಕಾರ್ಯಕ್ರಮ ನಡೆಯಲಿದ್ದು, ನಗರದ 15 ಕಾಲೇಜಿನ 500 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

'ವಿದ್ಯಾರ್ಥಿಗಳಿಗೆ ಅಭ್ಯಾಸ ಮತ್ತು ವೈರಾಗ್ಯ ಮರ್ಮ' ಕುರಿತು ಸ್ವಾಮಿ ಮಹಾಮೇದಾನಂದಜೀ ಪ್ರವಚನ ನೀಡುವರು ಹಾಗೂ ಜಗನ್ನಾಥ್ ನಾಡಿಗೇರ್ ಅವರು 'ಯೋಗ್ಯ ದಿನಚರಿಯಿಂದ ಮಾತ್ರ ಯಶಸ್ಸು ಸಾಧ್ಯ' ಎಂಬ ವಿಷಯ ಕುರಿತು ಉಪನ್ಯಾಸ ನೀಡುವರು. ಮಧ್ಯಾಹ್ನ 3ರಿಂದ 5ರ ವರೆಗೆ ಶಿಕ್ಷಕರಿಗಾಗಿ ಪ್ರಬುದ್ಧ ಚಿಂತನಾಗೋಷ್ಠಿ ಹಮ್ಮಿಕೊಂಡಿದ್ದು, ಪ್ರಾಥಮಿಕ ಹಿರಿಯ-ಕಿರಿಯ ಹಾಗೂ ಪ್ರೌಢ ಶಾಲೆಯ 300 ಶಿಕ್ಷಕರು ಭಾಗವಹಿಸಲಿದ್ದಾರೆ.

'ಸ್ವಯಂ ಅನುಷ್ಠಾನ ಮಾತ್ರ ಶಿಕ್ಷಕನನ್ನು ಪ್ರೇರಣಾದಾಯಕ ಗುರು ಪದವಿಗೇರಿಸ ಬಲ್ಲದು ಎಂಬ ವಿಷಯ ಕುರಿತು ಸ್ವಾಮಿ ಮಹಾಮೇಧಾನಂದಜೀ ಉಪನ್ಯಾಸ ನೀಡುವರು. ಜಗನ್ನಾಥ ನಾಡಿಗೇರ್ 'ಕಲಿಸುವ ವಿಷಯ ಮತ್ತು ವಿದ್ಯಾರ್ಥಿಗಳನ್ನು ಪ್ರೀತಿಸುವವರು ಮಾತ್ರ ಯೋಗ್ಯ ಶಿಕ್ಷಕನಾಗಬಲ್ಲ' ಎಂಬ ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.

ಬೆಂಗಳೂರಿನ ವಿವೇಕ ಹಂಸ ಬಳಗದವರಿಂದ ಸಂಜೆ 6ರಿಂದ 8.30ರ ವರೆಗೆ ಭಕ್ತರಿಗಾಗಿ ರಸಗಂಗೆ ಕಾರ್ಯಕ್ರಮ ಹಾಗೂ ನಿತ್ಯಸ್ಥಾನಂದಜೀ ಮತ್ತು ಮುಕ್ತಿದಾನಂದಜೀ ಅವರು ಆಶೀರ್ವಚನ ನೀಡುವರು.

# ಸಹಕಾರ ಭಾರತಿ ಜಿಲ್ಲಾ ಕಾರ್ಯಕಾರಿ ಸಮಿತಿ ರಚನೆ

ದಾವಣಗೆರೆ, ಜ. 20 - ಬೆಂಗಳೂರಿನ ಸಹಕಾರ ಭಾರತಿ, ಕರ್ನಾಟಕ ಸಹಕಾರ ಭಾರತಿಯ ಸುಗಮ ಕಾರ್ಯ ನಿರ್ವಹಣೆಗೆ ಅನುಕೂಲವಾಗುವ ದೃಷ್ಟಿಯಿಂದ ಮುಂದಿನ ಮೂರು ವರ್ಷಗಳ ಅವಧಿಗೆ ಕಾರ್ಯ ಕಾರಿಣಿ ಸಮಿತಿಯನ್ನು ರಾಜ್ಯಾಧ್ಯಕ್ಷ ಎಂ.ಆರ್. ಪ್ರಭುದೇವ, ಪ್ರಧಾನ ಕಾರ್ಯದರ್ಶಿ ಸಾಣೂರು ನರಸಿಂಹ ಕಾಮತ್ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು.

ದಾವಣಗೆರೆ ಜಿಲ್ಲಾ ಕಾರ್ಯಕಾರಿಣಿ ಸಮಿತಿಯ ಜಿಲ್ಲಾಧ್ಯಕ್ಷ ಹೆಚ್. ಇಂದ್ರಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕೆ. ಪರಶುರಾಮ್, ಜಿಲ್ಲಾ ಸಂಘಟನಾ ಕಾರ್ಯದಶಿಯಾಗಿ ಪಿ. ರವಿ (ಕೆ.ಪಿ.ಆರ್) ಇವರುಗಳು ನೇಮಕಗೊಂಡಿದ್ದಾರೆ.

ಜಿಲ್ಲಾ ಪ್ರಮುಖರಾಗಿ ಕ್ರೆಡಿಟ್ ಕೋ-ಆಪ್ ಪ್ರಮುಖರಾಗಿ ಸಿ.ಎ. ಉಮೇಶ್ ಶೆಟ್ಟಿ, ಪಿಎಸಿಎಸ್ ಪ್ರಮುಖರಾಗಿ ಬಿ. ಶೇಖರಪ್ಪ, ಹಾಲು ಒಕ್ಕೂಟದ ಪ್ರಮುಖ-ಪಾಲಾಕ್ಷಪ್ಪ, ಜಿಲ್ಲಾ ಮಹಿಳಾ ಪ್ರಮುಖ ಬಿ.ಹೆಚ್. ಪುಷ್ಪವತಿ, ಸಹ ಪ್ರಮುಖರಾಗಿ ಐನಹಳ್ಳಿ ಶೋಭಾ, ಜಿಲ್ಲಾ ಉಪಾಧ್ಯಕ್ಷ ಎ.ಎಂ. ಮಂಜುನಾಥ್ (ಪಿಎಲ್‌ಡಿ ), ಎಸ್.ಎಮ್. ಸಿದ್ದಲಿಂಗಪ್ಪ, ಜಿಲ್ಲಾ ಕಾರ್ಯದರ್ಶಿಗಳಾಗಿ ಡಿ.ಎಂ. ಶಿವಕುಮಾರ್, ಎಸ್.ಎಂ. ಶಿವಕುಮಾರ್ ಸ್ವಾಮಿ, ಜಿಲ್ಲಾ ಕಾರ್ಯಕಾರಿಣಿ ಸದಸ್ಯರುಗಳಾಗಿ ಬೆಳ್ಳೂಡಿ ರಾಮಚಂದ್ರಪ್ಪ, ಎ.ಸಿ. ರಾಘವೇಂದ್ರ, ಎಂ.ಎ. ನವೀನ್ ಜೈನ್, ದೇವರಾಜ್ ಅತ್ತಿಗೆರೆ, ಭವಾನಿ, ಕೆಜಿಡಿ ಬಸವರಾಜ್ ಇವರುಗಳು ನೇಮಕಗೊಂಡಿದ್ದಾರೆ ಎಂದು ಸಹಕಾರ ಭಾರತಿ ಕರ್ನಾಟಕ ತಿಳಿಸಿದೆ.

# ವಿದ್ಯಾರ್ಥಿ ಜೀವನ ಗೋಲ್ಡನ್ ಟೈಮ್



**ವಿದ್ಯಾರ್ಥಿನಿಯರೊಂದಿಗೆ ಲೋಕಸಭಾ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್ ಸಂವಾದ**

ದಾವಣಗೆರೆ, ಫೆ. 20- ವಸತಿ ಶಾಲೆಯ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹೇಳಬೇಕು. ಇದರಿಂದ ಅವರಲ್ಲಿನ ಆತಂಕ ನಿವಾರಣೆಯಾಗಲು ಸಾಧ್ಯವಾಗುತ್ತದೆ ಎಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಬೆಂಗಳೂರಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಂಯುಕ್ತಾಶ್ರಯದಲ್ಲಿ ಇಂದು ಆಯೋಜಿಸಿದ್ದ ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಯ ನೂತನ ಶಾಲಾ ಕಟ್ಟಡದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಸ್ವಚ್ಛ ಹಾಗೂ ಸುಂದರವಾದ ವಾತಾವರಣದಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಉತ್ತಮವಾದ ಪರಿಸರವಿದ್ದು.ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ವಿದ್ಯಾರ್ಥಿಗಳಿಗೆ ಲಭಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಸದರಾಗಿ ನಾನು ಕೂಡ ಸೂಕ್ತ ಸಹಕಾರ ನೀಡುತ್ತೇವೆ ಎಂದರು. ಪೋಷಕರು ನಂಬಿಕೆಯಿಟ್ಟು ಶಾಲೆಗೆ ಕಳಿಸುತ್ತಾರೆ. ಮಕ್ಕಳೂ ಕೂಡ ಶಿಸ್ತು- ಸಂಯಮದಿಂದ ವರ್ತಿಸಬೇಕು ಎಂದು ಪ್ರಭಾ ಸಲಹೆ ನೀಡಿದರು.

ಮಕ್ಕಳು ಉತ್ತಮ ವಿದ್ಯಾಭ್ಯಾಸದತ್ತ ಗಮನ ಹರಿಸಬೇಕು. ಜೊತೆಗೆ ಕ್ರೀಡೆ ಸೇರಿದಂತೆ ಇತರೆ ಚಟುವಟಿಕೆಗಳಲ್ಲೂ ತೊಡಗಿಕೊಳ್ಳಬೇಕು. ವಿದ್ಯಾರ್ಥಿ ಜೀವನ ಗೋಲ್ಡನ್ ಟೈಮ್ ಇದ್ದಂತೆ, ಅತ್ಯಂತ ಮಹತ್ವದ್ದಾಗಿದೆ.

ಶಿಕ್ಷಕರು ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡುವ ಜೊತೆಗೆ ಸೌಲಭ್ಯಗಳು ಸಮರ್ಪಕವಾಗಿ ದೊರೆಯುವಂತೆ ಮಾಡಬೇಕು ಎಂದರು. ಶಾಲೆಯ ಸುತ್ತಲೂ ಕಾಂಪೌಂಡ್ ನಿರ್ಮಾಣಕ್ಕೆ ಬೇಡಿಕೆಯಿಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕಾಂಪೌಂಡ್ ನಿರ್ಮಾಣ ಮಾಡಲಾಗುವುದು ಎಂದರು.

ಇದೇ ವೇಳೆ ಸಂಸದರು ವಿದ್ಯಾರ್ಥಿಗಳೊಂದಿಗೆ ಕೆಲ ಸಮಯ ಮುಕ್ತ ಸಂವಾದ ನಡೆಸಿ ಶಿಕ್ಷಣದ ಮಹತ್ವ ಹಾಗೂ ವಿದ್ಯಾರ್ಥಿಗಳ ಆಸಕ್ತಿ ಬಗ್ಗೆ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ, ತಹಶೀಲ್ದಾರ್ ಎಂ.ಬಿ.ಅಶ್ವತ್ಥ್, ಗ್ರಾ.ಪಂ. ಅಧ್ಯಕ್ಷ ಲೋಕಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಚಂದ್ರಣ್ಣ, ಕಲ್ಪನಾ ಪರಶುರಾಮ್ ಹಾಗೂ ಅಣಜಿ ಗ್ರಾಮಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನಗರಸಭೆ 1.74 ಕೋಟಿ ರೂ. ಉಳಿತಾಯ ಬಜೆಟ್

(1ನೇ ಪುಟದಿಂದ) ಕಾರ್ಯಗಳಿಗೆ ಹಣ ಮೀಸಲಿರಿಸಲಾಗಿದೆ ಎಂದು ಅಧ್ಯಕ್ಷರು ವಿವರಿಸಿದರು. ಸದಸ್ಯ ಪುಟ್ಟಪ್ಪ ಮರಿಯಮ್ಮನವರ ಬಜೆಟ್ಟನ್ನು ಅನುಮೋದಿಸಿದರು.

ಅಂತಿಮ ಯಾತ್ರೆಯ ವಾಹನ ಖರೀದಿಸುವುದು, ಮುನ್ಸಿಪಲ್ ಹೈಸ್ಕೂಲ್ ನೆಲಸಮಗೊಳಿಸಿ ಶಾಸಕರ ಅನುದಾನ ಪಡೆದು ಹೊಸ ಕಟ್ಟಡ ನಿರ್ಮಿಸಲು ಇನ್ನಷ್ಟು ಹಣ ಒದಗಿಸಬೇಕು ಎಂದು ಬಜೆಟ್ ಬೆಂಬಲಿಸಿ ಬಿಜೆಪಿಯ ಪ್ರಕಾಶ ಪೂಜಾರ, ನಿಂಗರಾಜ ಕೋಡಿಹಳ್ಳಿ, ರೂಪಾ ಚಿನ್ನಿಕಟ್ಟಿ, ಗಂಗಮ್ಮ ಹಾವನೂರ, ಮಲ್ಲಪ್ಪ ಅಂಗಡಿ ಅವರು ಮಾತನಾಡಿದರು.

## ಒಟಿಟಿಯಲ್ಲಿ ಅಶ್ಲೀಲತೆ ಕಡಿವಾಣಕ್ಕೆ ಸೂಚನೆ

ನವದೆಹಲಿ, ಫೆ. 20 - ಒಟಿಟಿ ವೇದಿಕೆಗಳ ಮೇಲೆ ಚಾಟಿ ಬೀಸಿರುವ ಕೇಂದ್ರ ಸರ್ಕಾರ, ಕಾನೂನಿಗೆ ವಿರುದ್ಧವಾದ ಅಂಶಗಳನ್ನು ಪ್ರಸಾರ ಮಾಡದಂತೆ ತಿಳಿಸಿದೆ. ಇದಕ್ಕಾಗಿ ಒಟಿಟಿ ವೇದಿಕೆಗಳು ಹಾಗೂ ಸ್ವಯಂ ನಿಯಂತ್ರಣ ಸಂಸ್ಥೆಗಳಿಗೆ ಸೂಚನೆಗಳನ್ನು ನೀಡಲಾಗಿದೆ.

2021ರ ಮಾಹಿತಿ ತಂತ್ರಜ್ಞಾನ ನಿಯಮಗಳ ಅನ್ವಯ ರೂಪಿಸಲಾಗಿರುವ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ವಯೋ ಆಧರಿತವಾಗಿ ಕಾರ್ಯಕ್ರಮಗಳನ್ನು ವಿಂಗಡಿಸಬೇಕು. ಅಶ್ಲೀಲತೆ ತಡೆಯಬೇಕು ಎಂದು ಸೂಚನೆ ನೀಡಲಾಗಿದೆ.

ಒಟಿಟಿ ವೇದಿಕೆಗಳಲ್ಲಿ ಆಕ್ಷೇಪಾರ್ಹ ಅಂಶಗಳು ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಸಂಸದರು ಹಾಗೂ ಹಲವಾರು ಸಂಘಟನೆಗಳಿಂದ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

## ಆವಕದ ಮೇಲೆ ನಿರ್ಬಂಧ

(1ನೇ ಪುಟದಿಂದ) ಎಂದು ಸರ್ಕಾರ ಹೇಳಿದೆ.

ಗೋಧಿ ಹಿಂಗಾರು ಬೆಳೆಯಾಗಿದ್ದು, ಹೊಸ ದಾಸ್ತಾನು ಮಾರ್ಚ್ ಅಂತ್ಯದಿಂದ ಮಾರುಕಟ್ಟೆಗೆ ಬರಲಿದೆ.

ವರ್ತಕರು ಹಾಗೂ ಸಗಟು ಮಾರಾಟಗಾರರು 250 ಟನ್ ಗೋಧಿ ಮಾತ್ರ ಸಂಗ್ರಹಿಸಬಹುದು ಎಂದು ಮಿತಿ ಹೇರಲಾಗಿದೆ. ಈ ಹಿಂದಿನ ಮಿತಿ 1 ಸಾವಿರ ಟನ್ ಆಗಿತ್ತು.

ಚಿಲ್ಲರೆ ವ್ಯಾಪಾರಿಗಳು ನಾಲ್ಕು ಟನ್ ದಾಸ್ತಾನು ಮಾತ್ರ ಹೊಂದಬಹುದು. ಮಾರ್ಚ್ 31ರವರೆಗೆ ಈ ನಿರ್ಬಂಧ ಇರಲಿದೆ.

ಗೋಧಿ ಸಂಸ್ಕರಣ ಘಟಕಗಳು ತಮ್ಮ ಮಾಸಿಕ ಅಳವಡಿಕೆ ಸಾಮರ್ಥ್ಯದ ಶೇಕಡ 50ರಷ್ಟು ದಾಸ್ತಾನು ಹೊಂದಲು ಮಾತ್ರ ಅವಕಾಶ ನೀಡಲಾಗಿದೆ.

# ದೋಬಿಘಾಟ್‌ನಲ್ಲಿ ವಿದ್ಯುತ್ ವಾಷಿಂಗ್ ಯಂತ್ರದ ಉದ್ಘಾಟನೆ



ದಾವಣಗೆರೆ, ಫೆ. 20- ಜಿಲ್ಲಾ ಮಡಿಕಟ್ಟೆ (ದೋಬಿ ಘಾಟ್)ಯ ಒಂದೂವರೆ ಕೋಟಿ ರೂ. ವೆಚ್ಚದ ಆಧುನಿಕ ವಿದ್ಯುತ್ ವಾಷಿಂಗ್ ಯಂತ್ರವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಾಜಿ ಮೇಯರ್ ಕೆ. ಚಮನ್ ಸಾಬ್, ಜಿಲ್ಲಾಧಿಕಾರಿ ಡಾ. ಗಂಗಾಧರ ಸ್ವಾಮಿ, ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಪಾಲಿಕೆ ಸದಸ್ಯರುಗಳು, ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ಎಂ. ನಾಗೇಂದ್ರಪ್ಪ, ಮಡಿವಾಳ ಹಾಸ್ಟೆಲ್ ಅಧ್ಯಕ್ಷ ನಾಗರಾಜ್, ಜಿಲ್ಲಾ ಮಡಿಕಟ್ಟೆ (ದೋಬಿ ಘಾಟ್) ಅಧ್ಯಕ್ಷ ಕಿಶೋರ್ ಕುಮಾರ್, ಗುತ್ಯಪ್ಪ, ಹನುಮಂತಪ್ಪ, ಶಿವಮೂರ್ತಪ್ಪ, ರವಿ, ಮಂಜಣ್ಣ, ಕೋಟೆಪ್ಪ, ರಮೇಶ್, ಫಕ್ಕೀರಪ್ಪ, ಸಿದ್ದೇಶ್, ಮಡಿವಾಳಪ್ಪ, ಹನುಮಂತಪ್ಪ, ಮಂಜುನಾಥ್, ಚೇತನ್, ವಿನಯ್ ಮತ್ತು ಇತರರು ಉಪಸ್ಥಿತರಿದ್ದರು.

## ಕ್ರೀಡಾಪಟುಗಳಿಂದ ಅರ್ಜಿ ಅಹ್ವಾನ

ಸಂತೇಬೆನ್ನೂರು, ಫೆ.20- ಸಂತೇಬೆನ್ನೂರಿನ ಚೈತನ್ಯ ಗುರುಕುಲ ಆಂಗ್ಲ ಮಾಧ್ಯಮ ವಸತಿಯುತ ಶಾಲೆಯಲ್ಲಿ ಅಥ್ಲೆಟಿಕ್ಸ್, ಮಲ್ಲಕಂಬ, ಯೋಗ, ಕರಾಟೆ ಈ ಕ್ರೀಡೆಗಳ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಕ್ರೀಡಾಪಟುಗಳು ಅರ್ಜಿಯನ್ನು ಅಧ್ಯಕ್ಷರು, ಚೈತನ್ಯ ಟ್ರಸ್ಟ್, ಸಂತೆಬೆನ್ನೂರು ಈ ವಿಳಾಸಕ್ಕೆ ಇದೇ ದಿನಾಂಕ 26 ರೊಳಗಾಗಿ ಸಲ್ಲಿಸಬೇಕು.

5ನೇ ತರಗತಿಯಿಂದ 9ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬೇಕಾಗಿದ್ದು, ಆಯ್ಕೆಯಾದ ಕ್ರೀಡಾಪಟುಗಳಿಗೆ ಶಿಕ್ಷಣ ಹಾಗು ವಸತಿ ಸೌಲಭ್ಯ ನೀಡಲಾಗುತ್ತಿದೆ. ವಿವರಕ್ಕೆ ಸಂಪರ್ಕಿಸಿ : ಮೊ: 9986739247, 8197691281.

## ಹಸಿವು ತಣಿಸುವುದು ಪುಣ್ಯದ ಕಾರ್ಯ

(1ನೇ ಪುಟದಿಂದ) ಸಂತರ್ಪಣೆ ಸೇವೆ ಮಾಡುತ್ತಾ ಬಂದಿದ್ದೇವೆ. ವರ್ಷದಿಂದ ವರ್ಷಕ್ಕೆ ಯಾತ್ರೆಗೆ ಹೊರಡುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದರು.

ರಥೋತ್ಸವಕ್ಕೆ ತೆರಳುವ ಭಕ್ತಾದಿಗಳಿಗೆ ಪಟ್ಟಣದ ತೆಗ್ಗಿನ ಮಠ, ಆರ್ಯ ವೈಶ್ಯ ಸಂಘ, ವೈದ್ಯಕೀಯ ಸಂಘ, ಕೆಂಪೇಶ್ವರ ದೇವಸ್ಥಾನ ಕಮಿಟಿಯವರು ಅನ್ನ ಸಂತರ್ಪಣೆ ಹಾಗೂ ವಸತಿ ಸೌಲಭ್ಯ ಮಾಡಿದ್ದರು.

ಈ ವೇಳೆ ಮುಖಂಡರಾದ ಸಂದೀಪ್, ಪ್ರದೀಪ್, ವಾಸವಿ ಸಮಾಜದ ರಾಘವೇಂದ್ರ ಶೆಟ್ಟಿ, ಮೆಡಿಕಲ್ ಕಿಟ್ಟಣ್ಣ, ಮುದಗಲ್ ಗುರುನಾಥ, ನಟೇಶ, ವಾಸವಿ ಮಹಿಳಾ ಸಮಾಜದವರು ಮತ್ತಿತರರಿದ್ದರು.

# ವೀರಶೈವ ಮಹಾಸಭಾದಿಂದ ಪಾದಯಾತ್ರಿಗಳಿಗೆ ಮಜ್ಜಿಗೆ ವಿತರಣೆ



ದಾವಣಗೆರೆ, ಫೆ.20- ಕೊಟ್ಟೂರು ಪಾದಯಾತ್ರೆ ಕೈಗೊಂಡಿರುವ ಭಕ್ತಾದಿಗಳಿಗೆ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ವತಿಯಿಂದ ನೀರು, ಮಜ್ಜಿಗೆ, ಕಲ್ಲಂಗಡಿ ಹಣ್ಣುಗಳನ್ನು ಇಂದು ವಿತರಿಸಲಾಯಿತು. ಮಹಾಸಭಾದ ಜಿಲ್ಲಾ ಘಟಕದ ಎಲ್ಲಾ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಸರ್ವಜ್ಞರಿಂದ ಸಮಾಜಕ್ಕೆ ಉತ್ತಮ ಸಂದೇಶ

## ತ್ರಿಪದಿ ಕವಿ ಜಯಂತಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ



ದಾವಣಗೆರೆ, ಫೆ.20- ಸರ್ವಜ್ಞರು ಸತ್ಯ ಶುದ್ಧ ಕಾಯಕ ಮಾಡುತ್ತಾ ಅನೇಕ ರೀತಿಯಲ್ಲಿ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ತ್ರಿಪದಿ ಕವಿ 'ಸರ್ವಜ್ಞ ಜಯಂತಿ' ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಸಮಾಜದ ಅಂಕು-ಡೊಂಕುಗಳನ್ನು ತ್ರಿಪದಿಯಲ್ಲಿ ವರ್ಣನೆ ಮಾಡಿದ್ದಾರೆ. ತಮ್ಮ ತ್ರಿಪದಿಗಳ ಮೂಲಕವೇ ಜೀವನದ ಅನುಭವ ಕಲಿಸಿಕೊಟ್ಟು ಬದುಕಿನ ಅರಿವು ಮೂಡಿಸುವ ಪ್ರಯತ್ನ ಮಾಡಿದ್ದರು. ಇಂತಹ ಮಹಾನ್ ವ್ಯಕ್ತಿಗಳ ತತ್ವವನ್ನು ಜೀವನದಲ್ಲಿ ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಮಾತನಾಡಿ, ಸರ್ವಜ್ಞ ಎಂದರೆ ಎಲ್ಲವನ್ನು ತಿಳಿದವನು, ಸಮಾಜದ ಜ್ಞಾನ ಅರಿತವರು. ಈ ನಿಟ್ಟಿನಲ್ಲಿ ಸರ್ವಜ್ಞ ಕವಿ ಬಹು ದೊಡ್ಡ ವ್ಯಕ್ತಿತ್ವವನ್ನು ಹೊಂದಿದ್ದರು ಎಂದು ಹೇಳಿದರು.

ಸಾಮಾನ್ಯರಿಗೂ ಅರ್ಥವಾಗುವ ಸರ್ವಜ್ಞರ ತ್ರಿಪದಿಗಳು ಹಾಗೂ ಅವರ ತತ್ವಾದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಮುಂದಿನ ಪೀಳಿಗೆಗೆ ತಲುಪಿಸುವಂತಹ ಕೆಲಸ ಮಾಡಬೇಕು ಎಂದರು.

ಸಮಾಜದ ಅಧ್ಯಕ್ಷ ಪುಷ್ಪರಾಜ್ ಮಾತನಾಡಿ, ತ್ರಿಪದಿ ಎಂದರೆ ಮೂರು ಸಾಲುಗಳ ಕವಿತೆ. ಆದ್ದರಿಂದ ಸರ್ವಜ್ಞನನ್ನು ತ್ರಿಪದಿ ಕವಿ ಎನ್ನುತ್ತಾರೆ. ಸರ್ವಜ್ಞರ ವ್ಯಕ್ತಿತ್ವ ಅನಿಕೇತನವಾದದ್ದು. ನಿಂತಲ್ಲಿ ನಿಲ್ಲದೆ, ಗಾಳಿಯಂತೆ ಊರೂರು ಸುತ್ತಿದ ಚಾರಣ ಕವಿ ಎಂದು ತಿಳಿಸಿದರು.

ಈ ವೇಳೆ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕುಂಬಾರ ಸಮಾಜದ ಕಾರ್ಯದರ್ಶಿ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.


ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ



ಸರ್ವರಿಗೂ
ಹಿಂದೂ ಹೃದಯ ಸಾಮ್ರಾಟ್, ಸ್ವಾಭಿಮಾನಿ
ರಾಷ್ಟ್ರ ನಿರ್ಮಾಣಕ್ಕೆ ಹೋರಾಡಿದ ಮಹಾನ್ ಪರಾಕ್ರಮಿ
ಶ್ರೀ ಛತ್ರಪತಿ ಶಿವಾಜಿ ಮಹಾರಾಜರ
ಜಯಂತಿಯ ಶುಭಾಶಯಗಳು.
ಹಾಗೂ
ಶ್ರೀ ಡಿ. ದೇವರಾಜ ಅರಸು ಬಡಾವಣೆ
'ಬಿ' ಬ್ಲಾಕ್‌ನಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ
ಶ್ರೀ ಭವಾನಿ ಕಲ್ಯಾಣ ಮಂಟಪ ಉದ್ಘಾಟನೆ
ದಿನಾಂಕ : 21.02.2025ನೇ ಶುಕ್ರವಾರ
ಸಮಯ : ಬೆಳಿಗ್ಗೆ 11.00 ಗಂಟೆಗೆ
ಶುಭ ಕೋರುವವರು :

ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
# 26/2ಎ, ವಿಜಯಲಕ್ಷ್ಮಿ ರೋಡ್, ದಾವಣಗೆರೆ 577 001. ☎ : 271688, 296900

ಶ್ರೀ ಗೋಪಾಲ್‌ರಾವ್ ಮಾನೆ, ಅಧ್ಯಕ್ಷರು
ಶ್ರೀ ಗಿರಿಧರ್ ಡಿ. ಮೆಹರ್ವಾಡೆ, ಉಪಾಧ್ಯಕ್ಷರು

ನಿರ್ದೇಶಕರುಗಳು
• ಶ್ರೀ ಸತ್ಯನಾರಾಯಣ ಆರ್.ಜಿ. • ಶ್ರೀ ಮನೋಹರ್ ವಿ. • ಶ್ರೀ ಯಲ್ಲಪ್ಪ ಜಿ.
• ಶ್ರೀ ಬಾಬುರಾವ್ ಸಾಳಂಕಿ ಎಸ್. • ಶ್ರೀ ವಿಠ್ಠಲ್ ಆರ್. • ಶ್ರೀಮತಿ ಅನಿತಾಬಾಯಿ ಮಾಲತೇಶ್‌ರಾವ್
• ಶ್ರೀ ಆನಂದ್ ಡಿ. ಸಫಾರೆ • ಶ್ರೀ ಬಾಬು • ಶ್ರೀಮತಿ ರೇಣುಕಾಬಾಯಿ
• ಶ್ರೀ ಗಣೇಶ ಪಿ. ಕ್ಷೀರಸಾಗರ • ಶ್ರೀಮತಿ ಡಾ. ರಜನಿ ಎಸ್. • ಶ್ರೀ ಎ.ಸಿ. ರಾಘವೇಂದ್ರ ಮೊಹರೆ, ವಕೀಲರು, ವೃತ್ತಿಪರ ನಿರ್ದೇಶಕರು
• ಶ್ರೀ ಮಧುಕರ್ ಎಸ್.ಕೆ. • ಶ್ರೀ ರಾಜು ಎಲ್. ಬದ್ದಿ • ಶ್ರೀ ರಾಜು ಮಹೇಂದ್ರಕರ್ ವಿ. ಚಾರ್ಟರ್ಡ್ ಅಕೌಂಟೆಂಟ್, ವೃತ್ತಿಪರ ನಿರ್ದೇಶಕರು

ಸಿಬ್ಬಂದಿಗಳು
• ಶ್ರೀ ನಾಗರಾಜ್ ಗೌಡನಕಟ್ಟೆ, ವ್ಯವಸ್ಥಾಪಕರು • ಶ್ರೀ ಅನಿಲ್ ಟಿ. ಮಾಳದಕರ್, ಸಹಾಯಕ ವ್ಯವಸ್ಥಾಪಕರು • ಶ್ರೀಮತಿ ಮಂಜುಳ ಎಂ.ಸಿ., ಲೆಕ್ಕಾಧಿಕಾರಿಗಳು
• ಶ್ರೀ ನವೀನ್‌ಕುಮಾರ್ ಎಂ. ಲೆಕ್ಕಾಧಿಕಾರಿಗಳು • ಶ್ರೀ ವಿನಾಯಕ್ ಎನ್. ಕಾಟ್ವೆ, ಕ್ಯಾಷಿಯರ್
ಸಹಾಯಕರು: • ಶ್ರೀ ಸುಜಿತ್ ಕಾಟ್ವೆ • ಶ್ರೀ ಅಂಕುಶ ಕೆ.ಟಿ. • ಶ್ರೀ ಕಿರಣ್ ಚವ್ಹಾಣ್ ವೈ. • ನಿರ್ಮಲ, ಸೇವಕರು
• ಶ್ರೀ ದೇವೇಂದ್ರರಾವ್ ಎಂ. ಲೋನ್ ರಿಕವರಿ ಅಧಿಕಾರಿಗಳು
ನಿತ್ಯನಿಧಿ ಸಂಗ್ರಹಕಾರರು: • ಶ್ರೀ ರಾಘವೇಂದ್ರ ಕೆ. • ಶ್ರೀ ಮಹೇಶ್ ಕೆ. ಸೊಳಂಕಿ • ಶ್ರೀ ಗಣೇಶ್‌ರಾವ್ ಪವಾರ್ • ಶ್ರೀ ಹನುಮಂತಪ್ಪ ಆರ್.



## ಸಾಹಿತಿ - ಶಿಕ್ಷಕಿ ಸೌಮ್ಯ ದಯಾನಂದ ಅವರ ಕೃತಿಗೆ ಕಸಾಪ ದತ್ತಿ ಪ್ರಶಸ್ತಿ



ದಾವಣಗೆರೆ, ಫೆ. 20- ಜಗಳೂರು ತಾಲ್ಲೂಕಿನ ದಿದ್ದಿಗೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಕನ್ನಡ ಭಾಷಾ ಶಿಕ್ಷಕಿ ಶ್ರೀಮತಿ ಸೌಮ್ಯ ದಯಾನಂದ ಅವರ 'ಸಂಜೆ ಐದರ ಸಂತೆ' ಕವನ ಸಂಕಲನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರದ ಘಟಕದ ಪುರಸ್ಕಾರ ಲಭಿಸಿದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ವಿವಿಧ 52 ದತ್ತಿ ಪ್ರಶಸ್ತಿಗಳಿಗಾಗಿ ಬರಹಗಾರರಿಂದ 2023ರಲ್ಲಿ ಪ್ರಕಟವಾದ ಕೃತಿಗಳನ್ನು ಆಹ್ವಾನಿಸಲಾಗಿತ್ತು. ಕವನ ಸಂಕಲನ ವಿಭಾಗದಲ್ಲಿ ಸೌಮ್ಯ ದಯಾನಂದ ಕೃತಿಗೆ ಪ್ರೊ. ಡಿ. ಸಿ. ಅನಂತ ಸ್ವಾಮಿ ದತ್ತಿ ಕವನ ಸಂಕಲನ ಪುರಸ್ಕಾರ ದೊರೆತಿದೆ.

ದೇಶ, ವಿದೇಶಗಳಿಂದ 4 ಸಾವಿರಕ್ಕೂ ಅಧಿಕ ಕೃತಿಗಳು ಸಲ್ಲಿಕೆಯಾಗಿದ್ದು, 12 ಪರಿಣಿತರ ಸಮಿತಿ ಆಯ್ಕೆ ಮಾಡಿದ ಪಟ್ಟಿಯನ್ನು ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ನೇತೃತ್ವದ ತಂಡ ಪರಿಶೀಲಿಸಿ ಅಂತಿಮ ಪಟ್ಟಿ ಬಿಡುಗಡೆ ಮಾಡಿದೆ. ಸೌಮ್ಯ ದಯಾನಂದ ಅವರು ಹಲವಾರು ಕಥೆ, ಲೇಖನಗಳನ್ನೂ ಬರೆದಿದ್ದಾರೆ. ದಾವಣಗೆರೆ ಜಿಲ್ಲಾ ಸಾವಿತ್ರಿಬಾಯಿ ಫುಲೆ ಉತ್ತಮ ಶಿಕ್ಷಕಿ ಪ್ರಶಸ್ತಿ, ದಾವಣಗೆರೆ ಮಹಾನಗರ ಪಾಲಿಕೆಯಿಂದ ಕೊಡಲಾಗುವ ರಾಜ್ಯೋತ್ಸವ ಪ್ರಶಸ್ತಿಗಳೂ ಲಭಿಸಿವೆ.

ಸೌಮ್ಯ, ದಾವಣಗೆರೆಯ ಹಿರಿಯ ನ್ಯಾಯವಾದಿ ಎಲ್. ದಯಾನಂದ ಅವರ ಧರ್ಮಪತ್ನಿ. ಮೂಲತಃ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಹೂವಿನಹೊಳೆ ಗ್ರಾಮದವರಾದ ಸೌಮ್ಯ, 'ಮಾಸ್ತಿಯವರ ಸಣ್ಣ ಕಥೆಗಳಲ್ಲಿ ಸ್ತ್ರೀ ಸಂವೇದನೆ' ವಿಷಯ ಕುರಿತು ದಾವಣಗೆರೆ ವಿವಿಯಲ್ಲಿ ಪಿಹೆಚ್‌ಡಿ ಪದವಿಗೆ ಮಹಾಪ್ರಬಂಧ ಮಂಡಿಸಲು ಸಿದ್ಧತೆ ನಡೆಸಿದ್ದಾರೆ.

## ನಗರದ ವನಿತಾ ಸಮಾಜದಲ್ಲಿ ಇಂದು ಸಾಂಸ್ಕೃತಿಕ ಸ್ಪರ್ಧೆ

ವನಿತಾ ಸಮಾಜದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಪಿ.ಜೆ. ಬಡಾವಣೆಯ ವನಿತಾ ಸಮಾಜದಲ್ಲಿ ಇಂದು ಮತ್ತು ನಾಳೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಇಂದು ಬೆಳಿಗ್ಗೆ 11ಕ್ಕೆ ಯೋಗಾಸನ ಸ್ಪರ್ಧೆ ನಡೆಯಲಿದೆ. ನಾಳೆ ಶನಿವಾರ ಮಧ್ಯಾಹ್ನ 2.30ಕ್ಕೆ ರಸ ಪ್ರಶ್ನೆ ಸ್ಪರ್ಧೆ ನಡೆಯಲಿದೆ. 25 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ ಎಂದು ಪದ್ಮ ಪ್ರಕಾಶ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9449811407.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂ.ಸಿ.ಸಿ. 'ಎ' ಬ್ಲಾಕ್, ನ್ಯಾಯಾಧೀಶರ ವಸತಿ ಗೃಹಗಳು, ತೊಗಟವೀರ ಕಲ್ಯಾಣ ಮಂದಿರ, ವಿನೋಬನಗರ 1ನೇ ಮುಖ್ಯ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


## ರವೀಂದ್ರ ಕುಂಟೆ ನಿಧನ



ದಾವಣಗೆರೆ ದಿಕ್ಷೀತ್ ರಸ್ತೆ, 2ನೇ ಕ್ರಾಸ್ ವಾಸಿ ಮತ್ತು
ಗೀತಾ ಟೆಕ್ಸ್‌ಟೈಲ್ಸ್ ಮಾಲೀಕರಾದ
**ಶ್ರೀ ರವೀಂದ್ರ ಕುಂಟೆ**
ಇವರು, ದಿನಾಂಕ 20.02.2025ರ ಗುರುವಾರ ಬೆಳಗಿನ ಜಾವ 3.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.02.2025ರ ಗುರುವಾರ ಸಂಜೆ 5 ಕ್ಕೆ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.
ದುಃಖತಪ್ತ ಕುಟುಂಬ ವರ್ಗ, ಮೊ. : 98863 79790

## ಅಭಿನಂದನೆಗಳು



ಕನ್ನಡಪ್ರಭ - ಏಷ್ಯಾನೆಟ್ ಸುವರ್ಣ ನ್ಯೂಸ್ ಸಂಸ್ಥೆ ವತಿಯಿಂದ ನೀಡಲಾಗುವ 'ಸುವರ್ಣ ಕನ್ನಡಿಗ - 2025' ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರಾದ
**ಡಾ. ಹೆಚ್. ವಿಶ್ವನಾಥ್** ಅವರಿಗೆ
ಹೃದಯಪೂರ್ವಕ ಅಭಿನಂದನೆಗಳು.

**ಕೆ.ಎಸ್. ಬಸವರಾಜ್**
ಶಾಸಕರು, ಮಾಯಕೊಂಡ ಕ್ಷೇತ್ರ.

**ಕೆ.ಎಸ್. ಗೋವಿಂದ್‌ರಾಜ್**
ಅಧ್ಯಕ್ಷರು, ದಾವಣಗೆರೆ ಮಹಾನಗರ ಪಾಲಿಕೆ ನೌಕರರ ಸಂಘ

## ಬೇಕಾಗಿದ್ದಾರೆ

ನಮ್ಮ ಶೋ ರೂಮ್‌ನಲ್ಲಿ ಸೇಲ್ಸ್ ಮಾಡಲು
ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
**ಶಾಂತಲಾ**
ದಿ ವೆಡ್ಡಿಂಗ್ ಮಾಲ್...
ಚಾಮರಾಜ್ ಪೇಟೆ, ದಾವಣಗೆರೆ.
ಮೊ. : 96861 95327

## ಅಭಿನಂದನೆಗಳು



ಸವಿತಾ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ.,
ಆಡಳಿತ ಮಂಡಳಿಯಲ್ಲಿ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿರುವ
**ಶ್ರೀ ಎನ್. ರಂಗಸ್ವಾಮಿ,** ವಕೀಲರು
ಇವರಿಗೆ ಹೃದಯಪೂರ್ವಕ ಅಭಿನಂದನೆಗಳು...
ಎಸ್. ಗೋಪಾಲಕೃಷ್ಣ, ಹೆಚ್.ಟಿ. ವಿಜಯಲಕ್ಷ್ಮಿ
ಹಾಲಿನ ವ್ಯಾಪಾರಿಗಳು, ಭಾರತ್ ಕಾಲೋನಿ, ದಾವಣಗೆರೆ.

## ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,

ಡೋ.ನಂ. 1343/1ಎ2, ಮೂರ್ತಪ್ಪ ಪ್ಲಾಜಾ, 1ನೇ ಮಹಡಿ, ಹದಡಿ ರಸ್ತೆ,
ದಾವಣಗೆರೆ - 577 002 ಫೋ : 08192 271329

ಸೊಸೈಟಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಹೃದಯಪೂರ್ವಕ ಅಭಿನಂದನೆಗಳು.



ಶ್ರೀ ಎನ್. ರಂಗಸ್ವಾಮಿ, ವಕೀಲರು, ಅಧ್ಯಕ್ಷರು



ಶ್ರೀ ಸಿ. ರಾಮಾಂಜನೇಯ ನಿರ್ದೇಶಕರು



ಶ್ರೀ ಜೆ. ಮಂಜುನಾಥ್ ನಿರ್ದೇಶಕರು



ಶ್ರೀ ಎನ್. ಗೋವಿಂದರಾಜ್ ನಿರ್ದೇಶಕರು



ಶ್ರೀ ಜಿ.ಸಿ. ಶ್ರೀನಿವಾಸ್ ಉಪಾಧ್ಯಕ್ಷರು



ಶ್ರೀ ಜಿ.ಆರ್. ಪಾಂಡುರಂಗ ವಿಠ್ಠಲ ನಿರ್ದೇಶಕರು



ಶ್ರೀ ಜಿ.ಟಿ. ಮಂಜುನಾಥ ನಿರ್ದೇಶಕರು



ಶ್ರೀ ಎಂ. ಗಂಗಾಧರ ನಿರ್ದೇಶಕರು



ಶ್ರೀಮತಿ ಸುವರ್ಣ ನಿರ್ದೇಶಕರು



ಶ್ರೀಮತಿ ಸಂಜೀವಮ್ಮ ನಿರ್ದೇಶಕರು


ಶುಭಾಶಯ ಕೋರುವವರು :
- ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗ, ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ದಾವಣಗೆರೆ.
- ಪಿಗ್ಮಿ ಹಾಗೂ ಸಾಲ ಸಂಗ್ರಹಣಕಾರರು, ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ದಾವಣಗೆರೆ.

## ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ (ರಿ.) ದಾವಣಗೆರೆ.



ಶ್ರೀ ಛತ್ರಪತಿ ಶಿವಾಜಿ ಮಹಾರಾಜ್















ದಾವಣಗೆರೆ ಜಿಲ್ಲಾ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ವತಿಯಿಂದ
ದಾವಣಗೆರೆ ನಗರದ ಶ್ರೀ ಡಿ. ದೇವರಾಜ ಅರಸು ಬಡಾವಣೆ
'ಬಿ' ಬ್ಲಾಕ್‌ನಲ್ಲಿ ನೂತನವಾಗಿ ನಿರ್ಮಿಸಿರುವ

### ಶ್ರೀ ಭವಾನಿ ಕಲ್ಯಾಣ ಮಂಟಪ ಉದ್ಘಾಟನಾ ಸಮಾರಂಭ

ಶುಕ್ರವಾರ 21 ಫೆಬ್ರವರಿ 2025 ಬೆಳಿಗ್ಗೆ 11 ಗಂಟೆಗೆ

ದಿವ್ಯ ಸಾನ್ನಿಧ್ಯ :
ಶ್ರೀ ಶ್ರೀ ಶ್ರೀ ಮಂಜುನಾಥ ಮಹಾಸ್ವಾಮಿಯವರು
ಶ್ರೀ ಭವಾನಿ ಪೀಠ, ಗೋಸಾಯಿ ಮಠ ಗವಿಪುರಂ, ಬೆಂಗಳೂರು.

ಮುಖ್ಯ ಅತಿಥಿಗಳು :

- ಡಾ. ಶಾಮನೂರು ಶಿವಶಂಕರಪ್ಪ — ಹಿರಿಯ ಶಾಸಕರು, ದಕ್ಷಿಣ ವಿಧಾನಸಭಾ ಕ್ಷೇತ್ರ, ದಾವಣಗೆರೆ.
- ಡಾ. ಜಿ.ಎಂ. ಸಿದ್ದೇಶ್ವರ — ಮಾಜಿ ಕೇಂದ್ರ ಸಚಿವರು, ಮಾಜಿ ಸಂಸದರು, ದಾವಣಗೆರೆ.
- ಶ್ರೀ ಸಂತೋಷ್ ಲಾಡ್ — ಕಾರ್ಮಿಕ ಸಚಿವರು ಕರ್ನಾಟಕ ಸರ್ಕಾರ
- ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ — ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ ಸಚಿವರು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು
- ಡಾ. ಪ್ರಭಾ ಮಲ್ಲಿಕಾರ್ಜುನ್ — ಲೋಕಸಭಾ ಸದಸ್ಯರು ದಾವಣಗೆರೆ.
- ಶ್ರೀ ಪಿ.ಜಿ.ಆರ್. ಸಿಂಧ್ಯಾ — ಮಾಜಿ ಗೃಹಮಂತ್ರಿಗಳು, ಕರ್ನಾಟಕ ಸರ್ಕಾರ
- ಶ್ರೀ ಶ್ರೀನಿವಾಸ ಮಾನೆ — ಶಾಸಕರು, ಹಾವೇರಿ ಜಿಲ್ಲೆ
- ಶ್ರೀ ಎಂ.ಜಿ. ಮೂಳೆ — ವಿಧಾನ ಪರಿಷತ್ ಸದಸ್ಯರು
- ಶ್ರೀ ಹೆಚ್. ಆಂಜನೇಯ — ಮಾಜಿ ಸಚಿವರು, ಸಮಾಜ ಕಲ್ಯಾಣ ಇಲಾಖೆ
- ಶ್ರೀ ಡಾ. ಪ್ರಕಾಶ್ ಪಾಗೋಜಿ — ವ್ಯವಸ್ಥಾಪಕ ನಿರ್ದೇಶಕರು ನಿಗಮ ಮಂಡಳಿ



ಅಧ್ಯಕ್ಷತೆ :
ಶ್ರೀ ಡಿ. ಮಾಲತೇಶರಾವ್ ಜಾಧವ್
ಅಧ್ಯಕ್ಷರು, ಶ್ರೀ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ (ರಿ.) ದಾವಣಗೆರೆ.



ಉಪಸ್ಥಿತಿ :
ಶ್ರೀ ಯಶವಂತರಾವ್ ಜಾಧವ್
ಗೌರವಾಧ್ಯಕ್ಷರು, ಶ್ರೀ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ (ರಿ.) ದಾವಣಗೆರೆ.

### ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

- ಶ್ರೀ ಎಂ. ಗೋಪಾಲರಾವ್ ಮಾನೆ, ಖಜಾಂಚಿ
- ಶ್ರೀ ಜಿ. ಯಲ್ಲಪ್ಪ ಢಮಾಳೆ, ಕಾರ್ಯದರ್ಶಿ

ಸದಸ್ಯರುಗಳು :
- ಶ್ರೀ ಡಿ. ವೆಂಕಟೇಶ್ ಕಾಟೆ
- ಶ್ರೀ ಎಸ್. ಬಾಬುರಾವ್ ಸಾಳಂಕೆ
- ಶ್ರೀ ಜಿ.ಎ. ಬಸವರಾಜ್ ಮಾನೆ
- ಶ್ರೀ ಆರ್.ಜಿ. ಸತ್ಯನಾರಾಯಣರಾವ್ ಜಾಧವ್
- ಶ್ರೀ ಜೊಳ್ಳಿ ಗುರು ಮಾನೆ
- ಶ್ರೀ ಸೋಮಶೇಖರ್ ಪವಾರ್
- ಶ್ರೀ ಜಿ.ಎಂ. ಪರಶುರಾಮ್‌ರಾವ್ ಸಾಳಂಕೆ
- ಶ್ರೀ ಆರ್. ಯಲ್ಲೋಜಿರಾವ್ ಪವಾರ್
- ಶ್ರೀ ಎಂ.ಎನ್. ಶಿವಾಜಿರಾವ್ ಸುರ್ವೆ
- ಶ್ರೀ ಟಿ. ಮಾರುತಿರಾವ್ ಘಾಟ್ಗೆ
- ಶ್ರೀ ಪಿ.ಜಿ. ಕೃಷ್ಣ ಪಿಸಾಳೆ
- ಶ್ರೀ ಕೆ.ಎನ್. ಮಂಜೋಜಿರಾವ್ ಗಾಯಕ್‌ವಾಡ್
- ಶ್ರೀ ಪಿ. ಶಿವಾಜಿರಾವ್ ಪಿಸಾಳೆ
- ಶ್ರೀ ಎಲ್. ಶಿವಾಜಿರಾವ್ ಮಾನೆ
- ಶ್ರೀ ಆರ್. ಹಾಲೇಶ್‌ರಾವ್ ಪವಾರ್
- ಶ್ರೀ ಎಸ್. ಬಸಾಜಿರಾವ್ ಶಿಂಧೆ
- ಶ್ರೀ ಗಜಾನನ ಜಾಧವ್

### ಶ್ರೀ ಜೀಜಾಮಾತಾ ಮಹಿಳಾ ಮಂಡಳಿ (ರಿ.) ದಾವಣಗೆರೆ

ಅಧ್ಯಕ್ಷರು : ಕುಮಾರಿ ಗೌರಾಬಾಯಿ ಮೋಹಿತೆ, ಕಾರ್ಯದರ್ಶಿ : ಶ್ರೀಮತಿ ಪದ್ಮಾವತಿ ಜಾಧವ್
ಸಹ ಕಾರ್ಯದರ್ಶಿ : ಶ್ರೀಮತಿ ಹೆಚ್.ಎನ್. ಶೋಭಾ ಗಾಯ್ಕವಾಡ್

### ಸರ್ವರಿಗೂ ಆದರದ ಸುಸ್ವಾಗತ ಕೋರುವವರು

ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ (ರಿ.), ದಾವಣಗೆರೆ. ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿ.
ಶ್ರೀ ಜೀಜಾ ಮಾತಾ ಮಹಿಳಾ ಮಂಡಳಿ ಮತ್ತು ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿ
ಶ್ರೀ ಛತ್ರಪತಿ ಶಿವಾಜಿ ಯುವಕರ ಸಂಘ, ದಾವಣಗೆರೆ ಮತ್ತು ಮರಾಠ ಸಮಾಜ ಬಾಂಧವರು


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas